ಸಂಪುಟ 01 | ಸಂಚಿಕೆ 45 | ಶುಕ್ರವಾರ 26 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1.ವೀರ ಬಾಲ್ ದಿವಸ್ (Veer Bal Diwas)**

Veer Bal Diwas ಎಂಬುದು ಗುರು ಗೌಬಿಂದ ಸಿಂಗ್‌–ಜಿಯ ನಾಲ್ಕು ಮಕ್ಕಳ ಧೈರ್ಯ ಮತ್ತು ಶಹೀದಿ ಸ್ಮರಣಾರ್ಥ ಆಚರಿಸಲಾಗುತ್ತದೆ. 1704 ರಲ್ಲಿ ಮಕ್ಕಳು ತಮ್ಮ ಧರ್ಮ ತ್ಯಾಗ ಮತ್ತು ಧೈರ್ಯಕ್ಕಾಗಿ ಶಹೀದಿಯಾಗಿದ್ದ ಘಟನೆಗೆ ಸಂಸ್ಮೃತಿ. ಸಿಖ್ ಸಮುದಾಯದ ಸಂಕೀರ್ಣ ಕಾರ್ಯಕ್ರಮಗಳು, ಧಾರ್ಮಿಕ ಸಭೆ ಹಾಗೂ ಮಕ್ಕಳ ಧೈರ್ಯದ ಕಥೆಗಳ ಪ್ರದರ್ಶನಗಳು ಜರುಗುತ್ತವೆ.

**2.ಡಿಸೆಂಬರ್ 26 ಇಂಡಿಯನ್ ಓಶನ್ ಸುನಾಮಿ ಸ್ಮಾರಕ ದಿನ** (ಭಾರತದಲ್ಲಿ ಆಚರಿಸಲಾಗುತ್ತದೆ) ಈ ದಿನವನ್ನು ಸುನಾಮಿಯಲ್ಲಿ ಸಾವನ್ನಪ್ಪಿದವರಿಗಾಗಿ ಭಾರತದಲ್ಲಿ ಸ್ಮರಣೆ ದಿನವಾಗಿ ಪಾಲಿಸಲಾಗುತ್ತದೆ.

## ಸುಭಾಷಿತ

ನಾವು ಬಯಸಿದಂತೆ ಬದುಕುವ
ಸ್ವಾತಂತ್ರ್ಯ ಯಾವತ್ತೂ ಭಯಾನಕ
ಹೋರಾಟದ ಫಲವೇ ಹೊರತು
ಸುಲಭಕ್ಕೆ ಸಿಗುವುದಿಲ್ಲ.

ಪೂರ್ಣಚಂದ್ರ ತೇಜಸ್ವಿ

## ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಮನಗೌಡ ಬುನ್ನಟ್ಟಿ ನಿಧನ

❑ ನೈಜ್ಯ ದೆಸೆ ನ್ಯೂಸ್

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಪಂಗಡ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ತಾಲ್ಲೂಕಿನ ಬುನ್ನಟ್ಟಿ ಗ್ರಾಮದ ಮುಖಂಡ ರಾಮನಗೌಡ ನಾಯಕ ಬುನ್ನಟ್ಟಿ (48) ಗುರುವಾರ ನಿಧನರಾದರು.



ರಾಮನಗೌಡ ನಾಯಕ ಅವರು ನವಲಿ ಕೃಷಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

2008ರಲ್ಲಿ ಈ ವಿಧಾನಸಭಾ ಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಾದಾಗ ನಡೆದ ಮೊದಲ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹಾಲಿ ಸಚಿವ ಶಿವರಾಜ ತಂಗಡಗಿ ಅವರೊಂದಿಗೆ ಗುರುತಿಸಿಕೊಂಡು ಪ್ರಚಾರ ಮಾಡಿದರು. ಸ್ವ ಗ್ರಾಮ ಬುನ್ನಟ್ಟಿಯಲ್ಲಿ ಸಂಜೆ 5 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. ಮೃತರು ಪತ್ನಿ, ಇಬ್ಬರು ಮಕ್ಕಳು ಸಹಿತ ಅಪಾರ ಬಂಧುಗಳನ್ನು ಅಗಲಿದ್ದಾರೆ.

### ಬಸ್ ಅಪಘಾತ ಮೃತರ ಕುಟುಂಬಕ್ಕೆ 5ಲಕ್ಷ ರೂ.ಪರಿಹಾರ ಸೂಕ್ತ ತನಿಖೆಗೆ

# ಸಿಎಂ ಸಿದ್ದರಾಮಯ್ಯ ಆದೇಶ

**ಬೆಂಗಳೂರು: ಚಿತ್ರದುರ್ಗದ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ 5 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ 50 ಸಾವಿರ ರೂ. ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.**

ಈ ಅಪಘಾತದ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಟ್ವೀಟ್ ಮಾಡಿರುವ ಅವರು ಬಸ್ ಬೆಂಕಿ ದರುಂತದ ಬಗ್ಗೆ ಆಘಾತ ವ್ಯಕ್ತಪಡಿಸಿ ಈ ರಸ್ತೆ ಅಪಘಾತದ ಬಗ್ಗೆ ತನಿಖೆ ನಡೆಸಲಾಗುವುದು ಎಂದಿದ್ದಾರೆ. ಸಿಎಂ ದುಃಖ: ಚಿತ್ರದುರ್ಗ ಬಳಿ ಸಂಭವಿಸಿದ ಲಾರಿ ಮತ್ತು ಬಸ್ ನಡುವಿನ ಅಪಘಾತದಲ್ಲಿ ಹಲವು ಪ್ರಯಾಣಿಕರು ಸಜೀವ ದಹನವಾದ ಘೋರ ದುರಂತದ ಸುದ್ದಿ ಕೇಳಿ ಎದೆ ನಡುಗಿತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಕ್ರಿಸ್‌ಮಸ್ ರಜೆಯಲ್ಲಿ ಊರಿಗೆ ತೆರಳುತ್ತಿದ್ದವರ ಪ್ರಯಾಣ ಈ ರೀತಿ ದುರಂತದಲ್ಲಿ ಕೊನೆಗೊಂಡಿರುವುದು ವಿಷಾದನೀಯ ಎಂದಿದ್ದಾರೆ.

ಅಪಘಾತದ ಬಗ್ಗೆ ಸೂಕ್ತ ತನಿಖೆ ನಡೆಸಿ ಕಾರಣವನ್ನು ಪತ್ತೆ ಹಚ್ಚಲಾಗುವುದು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು



ಪ್ರಾರ್ಥಿಸುತ್ತೇನೆ. ಅಪಘಾತದಲ್ಲಿ ಮಡಿದ ಕುಟುಂಬಸ್ಥರ ದುಃಖದಲ್ಲಿ ನಾನು ಭಾಗಿ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ. ಡಿಸಿಎಂ, ಸಚಿವರು, ಬಿಎಸ್‌ವೈ, ಬಿವಿವೈ, ಹೆಚ್‌ಡಿಕೆ ಶೋಕ ಚಿತ್ರದುರ್ಗದ ಬಳಿ ನಡೆದ ಬಸ್ ಅಗ್ನಿ ದುರಂತಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ವಿ. ಸೋಮಣ್ಣ, ಶೋಭಕರಂದ್ಲಾಜೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಚಿವರುಗಳಾದ ರಾಮಲಿಂಗರೆಡ್ಡಿ, ಡಾ. ಜಿ. ಪರಮೇಶ್ವರ್, ಶಿವಾನಂದ ಪಾಟೀಲ್, ಜಮೀರ್ ಅಹ್ಮದ್ ಖಾನ್, ಸೇರಿದಂತೆ ಹಲವು ಸಚಿವರು ದುಃಖ ವ್ಯಕ್ತಪಡಿಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಸ್ ಅಪಘಾತ ಸಂಭವಿಸಿ ಹಲವರು ಸಜೀವ ದಹನವಾಗಿರುವ ಸುದ್ದಿ ತಿಳಿದು ತೀವ್ರ ಆಘಾತವಾಗಿದೆ. ಮೃತಪಟ್ಟವರಿಗೆ ನನ್ನ ಸಂತಾಪಗಳನ್ನು ತಿಳಿಸುತ್ತೇನೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸಹ ಬಸ್ ಅಗ್ನಿ ದುರಂತದ ಸುದ್ದಿ ಮನಸ್ಸಿಗೆ ತೀವ್ರ ಆಘಾತ ಉಂಟು ಮಾಡಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಗೊಂಡವರು ಬೇಗ ಚೇತರಿಸಿಕೊಳ್ಳಲಿ ಎಂದಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ದುರಂತದ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿ. ದುರಂತದಲ್ಲಿ ಜೀವ ಚೆಲ್ಲಿದವರಿಗೆ ದೇವರು ಚಿರಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಚಿತ್ರದುರ್ಗದ ಬಳಿ ಖಾಸಗಿ ಬಸ್ ಹೊತ್ತಿ ಉರಿದು ಹಲವರು ಸಾವನ್ನಪ್ಪಿದ್ದಾರೆ ಎಂಬ ಸುದ್ದಿ ಆಘಾತ ತಂದಿದೆ. ಈ ಭೀಕರ ದುರಂತದಲ್ಲಿ ವಿಧಿವಶರಾದವರಿಗೆ ದೇವರು ಸದ್ಗತಿ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ. ಪ್ರತಿಪಕ್ಷ ನಾಯಕ ಆರ್. ಅಶೋಕ್ ಸಹ ಈ ದುರ್ಘಟನೆಗೆ ದುಃಖ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದಾರೆ.

## ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಸಿದ ಶಾಸಕ ಅಪ್ಪಾಜಿ ನಾಡಗೌಡ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕು ಪಂಚಾಯತ್ ವತಿಯಿಂದ ವಿಕಲಚೇತನರಿಗೆ 2024 ನೇ ಸಾಲಿನ ಅನುದಾನದ ಮೂರು ತ್ರಿಚಕ್ರ ವಾಹನಗಳನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡರು ಫಲಾನುಭವಿಗಳಿಗೆ ಮಂಗಳವಾರ ವಿತರಿಸಿದರು.**



ಈ ಸಂದರ್ಭದಲ್ಲಿ ಮಾತನಾಡಿದ ಅವರು ಇವತ್ತು ತಾಲೂಕ ಪಂಚಾಯತ್ ವತಿಯಿಂದ 2024ನೇ ಸಾಲಿನ ಅನುದಾನದಲ್ಲಿ ವಿಕಲಚೇತನ ಫಲಾನುಭವಿಗಳಿಗೆ ಮಂಜೂರಾದ ಮೂರು ತ್ರಿಚಕ್ರ ವಾಹನಗಳ ಪೈಕಿ ವುಳಿದ ವಾಹನಗಳನ್ನು ವಿತರಿಸಿದ್ದೇನೆ ಇದರ ಸದ್ಬಳಕೆಯನ್ನು ಅವರು ಮಾಡಿಕೊಳ್ಳಬೇಕೆಂದು ತಿಳಿಸುತ್ತೇನೆ ಎಂದರು.

ಈ ಸಮಯದಲ್ಲಿ ಜಿಲ್ಲಾ ಪಂಚಾಯತ್ ಲೆಕ್ಕಾಧಿಕಾರಿ ರಾಮಣ್ಣ ಅಥ–'ಣಿ, ತಾಪಂ ಇಓ ಅನುಸೂಯಾ ಚಲವಾದಿ, ಮುಖಂಡರಾದ ಸಿದ್ದನಗೌಡ ಪಾಟೀಲ ನಾವದಗಿ, ಪ್ರಭುಗೌಡ ಮದರಕಲ್ಲ, ಸಂಗಮೇಶ ದೇಸಾಯಿ, ರೋಷನ್ ಡೋಣಿ, ಸಂಗನಗೌಡ ಅಸ್ಕಿ, ಆರೀಫ ಕೆಂಭಾವಿ,ತಾಪಂನ ಬಸನಗೌಡ ಚೌಧರಿ, ಮಹಾಂತಗೌಡ ದೊರೇಗೋಳ ಹಾಗೂ ಸಿಬ್ಬಂದಿಗಳು ಇದ್ದರು.

## ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ವತಿಯಿಂದ ಅಟಲ್ ಸ್ಮೃತಿ ವರ್ಷ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ಕಾರ್ಯಾಲಯದಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಯವರ ಜನ್ಮದಿನ ಅಂಗವಾಗಿ ಅಟಲ್ ಸ್ಮೃತಿ ವರ್ಷ ಆಚರಿಸಲಾಯಿತು.**

ಬಿಜೆಪಿ. ಮಾನ್ವಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಭೋಗವಾತಿ ಮಾತನಾಡಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಯವರು ಭಾರತ ದೇಶ ಕಂಡ ಒಬ್ಬ ಶ್ರೇಷ್ಠ ಪ್ರಧಾನಿ ಹಾಗೂ ಕವಿ,ವಾಗ್ಮಿ,ರಾಜ–ಕಾರಣಿಯಾಗಿದ್ದರು ದೇಶದ ಅಭಿವೃದ್ಧಿಗೆ ಅತ್ಯಂತ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಹಿರಿಯ ಮುಖಂಡರಾದ ಜೆ.ಸುಧಾಕರ್,ಗುರುಸಿದ್ದಪ್ಪ ಕಣ್ಣೂರು,ಶರಣೆಗೌಡ ನಕ್ಕುಂದಿ,ಜಗದೀಶ ಓತ್ತೂರು, ಗೋಪಾಲ ಇಭ್ರಾಮಪುರ್, ಹನಮೇಶ ನಾಯಕ ಜಿನೂರ್, ಕುಮಾರ ಮೇದಾ,ಸುರೇಶ ನಕ್ಕುಂದಿ, ಸೇರಿದಂತೆ ಇನ್ನಿತರರು ಇದ್ದರು. ಮಾನ್ವಿ: ಪಟ್ಟಣದ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ಕಾರ್ಯಾಲಯದಲ್ಲಿ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಯವರ ಜನ್ಮದಿನ ಅಂಗವಾಗಿ ಅಟಲ್ ಸ್ಮೃತಿ ವರ್ಷ ಆಚರಿಸಲಾಯಿತು.

## ಕ್ರಿಸ್‌ಮಸ್ ಹಬ್ಬದ ಸಂಭ್ರಮ ಲೊಯೋಲಾ ಶಾಲೆಗೆ ಶಾಸಕ ಹಂಪಯ್ಯ ನಾಯಕ್ ಭೇಟಿ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ. ಹಂಪಯ್ಯ ನಾಯಕ ಹಾಗೂ ರಾಜ್ಯ ಯುವ ಮುಖಂಡರಾದ ರವಿ ಬಸರಾಜು ಪಟ್ಟಣದ ಲೊಯೋಲಾ ಶಾಲೆಗೆ ಭೇಟಿ ನೀಡಿ ಕ್ರೈಸ್ತ ಬಾಂಧವರಿಗೆ ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಶಯಗಳನ್ನು ತಿಳಿಸಿದರು.**

ಈ ವೇಳೆ ಮಾತನಾಡಿದ ಅವರು, ಕ್ರಿಸ್‌ಮಸ್ ಹಬ್ಬವು ಪ್ರೀತಿ, ಸಹೋದರತ್ವ ಹಾಗೂ ಮಾನವೀಯ ಮೌಲ್ಯಗಳ ಸಂದೇಶವನ್ನು ನೀಡುವ ಹಬ್ಬವಾಗಿದ್ದು, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸುವಲ್ಲಿ ಇಂತಹ ಹಬ್ಬಗಳ ಪಾತ್ರ ಮಹತ್ವದ್ದೆಂದು ಹೇಳಿದರು. ಎಲ್ಲಾ ಧರ್ಮಗಳ ಹಬ್ಬಗಳನ್ನು ಒಂದೇ ಮನೋಭಾವದಿಂದ



ಆಚರಿಸುವ ಮೂಲಕ ಸೌಹಾರ್ದತೆಯ ನಾಡನ್ನು ಮತ್ತಷ್ಟು ಬಲಪಡಿಸಬೇಕೆಂದು ಅವರು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಗಫೊರ್ ಸಾಬ್, ಪಂಚ ಗ್ಯಾರೆಂಟಿಗಳ ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ, ಮುಖಂಡರಾದ ಖಾಲಿದ್ ಸಾಹೇಬ್, ಬಾಲಸ್ವಾಮಿ ಕೊಡ್ಲಿ, ರೌಡರ್ ಸ್ವಾಮಿ, ಸುಭಾಸ್ ನಾಯಕ್, ಜಿ. ನಾಗರಾಜ್ ಸೇರಿದಂತೆ ಅನೇಕ ನಾಯಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ನ್ಯಾಯಾಲಯದ ಕಟ್ಟಡ, ವಕೀಲರ ಭವನ ನಿರ್ಮಾಣಕ್ಕೆ ಜಾಗ ಒದಗಿಸಲು ವಕೀಲರ ಸಂಘದಿಂದ ಶಾಸಕ ಹಂಪನಗೌಡರಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಹಳೆ ಐ.ಬಿ ಜಾಗವನ್ನು ನ್ಯಾಯಾಲಯದ ಕಟ್ಟಡ, ನ್ಯಾಯಾಧೀಶರ ವಸತಿಗೃಹ ಹಾಗೂ ವಾಹನ ಪಾರ್ಕಿಂಗ್ ಅನುಕೂಲಕ್ಕಾಗಿ ಒದಗಿಸುವುದು ಮತ್ತು ವಕೀಲರ ಭವನ ನಿರ್ಮಾಣ–ಕ್ಕೆ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ತಾಲೂಕು ನ್ಯಾಯವಾದಿಗಳ ಸಂಘದ ವತಿಯಿಂದ ಬುಧವಾರ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಮನವಿ ಸಲ್ಲಿಸಲಾಯಿತು.**

ಕಕ್ಷಿದಾರರಿಗೆ, ವಕೀಲರಿಗೆ ಜಾಗದ ಕೊರತೆ ಸ್ಥಳೀಯವಾಗಿ 5 ಕೋರ್ಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ವಕೀಲರ ಸಂಘದಲ್ಲಿ 500 ವಕೀಲರು ಇದ್ದು, ವಕೀಲರಿಗೆ ಸುಸಜ್ಜಿತವಾದ ವಕೀಲರ ಭವನ ಇರುವುದಿಲ್ಲ. ಈಗಿರುವ ಕೋರ್ಟ್‌ಗಳಲ್ಲಿ ಸುಮಾರು 7000ರಿಂದ 8000



ಪ್ರಕರಣಗಳು ಬಾಕಿ ಇರುತ್ತವೆ. ಎಲ್ಲಾ ವಕೀಲರು ಮತ್ತು ಕಕ್ಷಿದಾರರು ತಮ್ಮ ವಾಹನಗಳನ್ನು ಕೋರ್ಟಿಗೆ ತೆಗೆದುಕೊಂಡು ಬರುತ್ತಾರೆ. ಇದರಿಂದಾಗಿ ವಾಹನ ನಿಲ್ಲಿಸಲು, ಕಕ್ಷಿದಾರರಿಗೆ ವಿಶ್ರಾಂತಿ ತೆಗೆದುಕೊಳ್ಳಲು ನ್ಯಾಯಾಲಯದ ಆವರಣದಲ್ಲಿ ಜಾಗದ ಕೊರತೆ ಇರುತ್ತದೆ ಎಂದು ಮನವಿಯಲ್ಲಿ ಪ್ರಸ್ತಾಪಿಸಿದ್ದಾರೆ. ಹಳೆ ಐಬಿ ಜಾಗೆ ನೀಡಲು ಮನವಿ ನ್ಯಾಯಾಲಯದ ಆವರಣದ ದಕ್ಷಿಣ ದಿಕ್ಕಿಗೆ ಸ.ನಂ 767// *ರಲ್ಲಿ ಹಳೆ ಐ.ಬಿ ಜಾಗವಿದ್ದು, ಈ ಜಾಗವು ನ್ಯಾಯಲಯಕ್ಕೆ ಹೊಂದಿಕೊಂಡಿರುವುದ–ರಿಂದ ವಿವಿಧ ಉದ್ದೇಶದ ಸಲುವಾಗಿ ಬಿಟ್ಟುಕೊಟ್ಟರೆ, ಅನುಕೂಲ ವಾಗುತ್ತದೆ.

ಲೋಕೋಪಯೋಗಿ ಇಲಾಖೆ ಸಂಬಂಧಿಸಿದ ಸ.ನಂ: 767// * ವಿಸ್ತೀರ್ಣ 02 ಎಕರೆ 22 ಗುಂಟೆ ಪೈಕಿ 01 ಎಕರೆ 10 ಗುಂಟೆ ನ್ಯಾಯಾಲಯದ ಸಲುವಾಗಿ ಬಿಟ್ಟುಕೊಟ್ಟರೆ, ಜಿಲ್ಲಾ ನ್ಯಾಯಲಯ ಕಟ್ಟಡ ಕಟ್ಟಲು, ವಾಹನ ನಿಲ್ಲಿಸಲು ಹಾಗೂ ನ್ಯಾಯದೀಶರ ವಸತಿಗೃಹ ಕಟ್ಟಡ ನಿರ್ಮಿಸಲು ಅನುಕೂಲವಾಗುತ್ತದೆ. ಆದ್ದರಿಂದ ಈ ಕುರಿತು ಸಂಬಂದಪಟ್ಟ ಇಲಾಖೆಗೆ ಆದೇಶಿಸಿ ಕ್ರಮ ಕೈಗೊಳ್ಳಬೇಕು" ಎಂದು ಮನವಿಯಲ್ಲಿ ತಿಳಿಸಲಾಗಿದೆ ವಕೀಲರ ಸಂಘದಲ್ಲಿ 500 ವಕೀಲರು ಇದ್ದು, ಹಿರಿಯ, ಕಿರಿಯ, ಮಹಿಳಾ ನ್ಯಾಯವಾದಿಗಳು ಸಕ್ರಿಯವಾಗಿ ವೃತ್ತಿಯನ್ನು ನಿರ್ವಹಿಸುತ್ತಿದ್ದಾರೆ. ಆದರೆ ವಕೀಲರಿಗೆ ಸುಸಜ್ಜಿತವಾದ ವಕೀಲರ ಭವನ ಇರುವುದಿಲ್ಲ. ವಕೀಲರ ಭವನದ ಹೊಸ ಕಟ್ಟಡಕ್ಕೆ ಅನುದಾನ ಬಿಡುಗಡೆ ಮಾಡಲು ಈಗಾಗಲೇ ಕರ್ನಾಟಕ ಸರಕಾರಕ್ಕೆ ಮಾನ್ಯ ಹೈಕೋರ್ಟ್ ಬೆಂಗಳೂರು ಸರ್ಕಾರಕ್ಕೆ ಪತ್ರಗಳನ್ನು ಕಳುಹಿಸಿದ್ದು, ಇಲ್ಲಿಯವರೆಗೂ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಹಾಗಾಗಿ ಕೂಡಲೇ ಅನುದಾನ ಬಿಡುಗಡೆ ಮಾಡಿಸಿ ವಕೀಲರ ಭವನ ನಿರ್ಮಿಸಿಕೊಡಬೇಕು ಎಂದು ತಾಲೂಕು ನ್ಯಾಯವಾದಿಗಳ ಸಂಘದವರು ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ತಾಲೂಕು ನ್ಯಾಯವಾದಿಗಳ ಸಂಘದ ಅಧ್ಯಕ್ಷ ಕೆ.ಭೀಮನಗೌಡ, ಹಿರಿಯ ವಕೀಲರಾದ ಎಂ.ಕಾಳಿಂಗಪ್ಪ, ಕೆ.ಅಮರೇಗೌಡ, ವಕೀಲರಾದ ನಿರುಪಾದೆಪ್ಪ ಗುಡಿಹಾಳ, ಖಾಜಿಮಲಿಕ್, ಭೀಮರಾಯ, ಬಸವರಾಜ, ಬಾಬರ್‌ಪಾಷಾ, ಆರ್.ಕೆ.ನಾಗರಾಜ ಸೇರಿದಂತೆ ವಕೀಲರ ಸಂಘದ ಪದಾಧಿಕಾರಿಗಳು, ವಕೀಲರು ಇದ್ದರು.

## ಸಾಹಿತ್ಯ ಸಿಂಚನ

ದುರಂತ.!

ನಾವೇಕೆ ಹೀಗಾಗುತ್ತಿದ್ದೇವೆ.?
ಝುಗಮುಗಿಸುವ ಮಾಲಿನಲಿ
ಹವಾನಿಯಂತ್ರಿತ ಗಾಳಿಯಲಿ
ಉಬ್ಬುತ್ತೇವೆ ಮಬ್ಬಾಗುತ್ತೇವೆ
ಕುಬೇರನ ಮಕ್ಕಳಾಗುತ್ತೇವೆ.!

ಕೊತ್ತಂಬರಿ ಕಂತೆಯೊಂದಕ್ಕೆ
ಇಪ್ಪತ್ತು ರುಪಾಯಿಯೆಂದರೂ
ಟಿ.ವಿ. ಒಂದಕೆ ಲಕ್ಷವೆಂದರೂ
ಶೀವಿಯಲಿ ಕೇಳಿದಷ್ಟು ಕೊಟ್ಟು
ಗತ್ತಿನಲಿ ಕತ್ತೆತ್ತೆತ್ತಿ ಬೀಗುತ್ತೇವೆ.!

ಹೊರಬಂದು ರಸ್ತೆಬದಿಯಲಿ
ಹಣ್ಣು, ಹೂಮಾರುವರೊಂದಿಗೆ
ಒಂದೊಂದು ರೂಪಾಯಿಗೂ
ಹಠದಿ ಚೌಕಾಸಿಗಿಳಿಯುತ್ತೇವೆ.!
ಕೆಟ್ಟ ದಟ್ಟ ದರಿದ್ರರಂತಾಡುತ್ತೇವೆ.!

ಕಲ್ಲುದೇವರ ಮುಂದೆ ನಿಂತು
ಆ ಕಬ್ಬಿಣದ ಹುಂಡಿಗೆ ಸಾವಿರ
ಸಾವಿರದ ನೋಟು ಹಾಕುತ್ತೇವೆ.!
ವಿಧ ವಿಧ ಸೇವೆಗಳ ಹೆಸರಲ್ಲಿ
ಧನಕನಕವಿಟ್ಟು ಅಡ್ಡಬೀಳುತ್ತೇವೆ.!

ಹೊರಬಂದು ಮುಂಬಾಗಿಲಲಿ
ಅಸಹಾಯಕ ಭಿಕ್ಷುಕರೆದುರು
ಚಪ್ಪಲಿ ಕಾಯ್ವ ಹುಡುಗನೆದುರು
ಚಿಲ್ಲರೆಕಾಸಿಗು ಜಿಪುಣರಾಗುತ್ತೇವೆ.!
ಪೈಸೆ ಪೈಸೆ ಲೆಕ್ಕ ಮಾಡುತ್ತೇವೆ.!

ಅನ್ನದಾತ ಬಡರೈತನೊಂದಿಗೆ
ಶೂಪಾಲೀಶ್ ಹುಡುಗನೊಂದಿಗೆ
ಶ್ರಮಿಕ ಕೂಲಿ ಕಾರ್ಮಿಕರೊಂದಿಗೆ
ನಿರ್ದಯದಿ ಲೋಭಿಗಳಾಗುತ್ತೇವೆ.!
ಅಕ್ಷರಶಃ ನಾವೇ ಭಿಕ್ಷುಕರಾಗುತ್ತೇವೆ.!

ಸಮುದ್ರದಿ ಮೀನು ಹಿಡಿಯದೆ
ಚರಂಡಿಗೆ ಗಾಳ ಹಾಕುತ್ತೇವೆ.!
ನಾಗರೀಕರಾದಂತೆಲ್ಲ ಅದೇಕೋ
ಅಮಾನವೀಯರಾಗುತ್ತಿದ್ದೇವೆ.!
ಕುಬ್ಜರಾಗಿ ಕಟುಕರಾಗುತ್ತಿದ್ದೇವೆ.!

ಹೊರಗಟೀ ಬದಲಾಗುವ ಭರದಿ
ಒಳಗೆ ದಿನವು ಬರಡಾಗುತ್ತಿದ್ದೇವೆ
ಆಧುನಿಕತೆಯ ಹಮ್ಮುಬಿಮ್ಮಿನಲಿ
ಜೀವಸೆಲೆಯಿರದೆ ಕೊರಡಾಗುತ್ತಿದ್ದೇವೆ.!
ಸಮೂಹಸನ್ನಿಗೆ ಕುರುಡಾಗುತ್ತಿದ್ದೇವೆ.!

ಆಂತರ್ಯ ಅಂತಃಕರಣ ಬೆಳಗದೆ
ಬದುಕಿನ ಅಭಿವೃದ್ಧಿಗೆ ಅರ್ಥವಿರದು
ಭಾವಬಿತ್ತಿಯ ಅಂಧಕಾರ ಕಳೆಯದೆ
ಮಮಕಾರದ ಬೆಳಕು ಹೊಳೆಯದೆ
ಜೀವನದ ಪ್ರಗತಿ ಸಾರ್ಥಕವಾಗದು.!

ಇಂದು ನಿಜ ಪ್ರಗತಿಯೆಂದರೇನೆಂದು
ಅಭಿವೃದ್ಧಿಯ ಪಥವೆಂದರೇನೆಂದು
ಒಮ್ಮೆ ಕೇಳಿಕೊಳ್ಳಲೇಬೇಕಿದೆ ನಾವು..
ಸರ್ಕಾರಿ ಸೌಲಭ್ಯ, ಸಾಮಾಜಿಕತೆಗಳು
ಅಷ್ಟೇ ಏನು ಪ್ರಗತಿಯ ಗಮ್ಯ ತಾವು?

ಒಳಹೊರಗಣ ಸತ್ಯಾವಲೋಕನದಲಿ
ಅರಿಯುತ ತಿದ್ದಿಕೊಳ್ಳಬೇಕಿದೆ ನಿತ್ಯವು
ಸ್ವವಿಮರ್ಷೆ ಪಾಕದಿ ಸಾಮಾಜಿಕತೆಯ
ಚಿರಂತನ ಪ್ರಗತಿ ಸಾಧಿಸಬೇಕಿದೆ ನಾವು
ಅರಳಬೇಕಿದೆ ಅಭಿವೃದ್ಧಿಯ ಹೂವು.!

ಎ. ಎನ್. ರಮೇಶ್ ಗುಬ್ಬಿ.

# ಕ್ರಿಸ್ತ ಜಯಂತಿ ಆಚರಣೆ–ಆರ್.ಎಚ್. ನಂಬರ್ ಒನ್ (ಬರ್ಮಾ ಕ್ಯಾಂಪ್)

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಆರ್.ಎಚ್. ನಂಬರ್ ವನ್ (ಬರ್ಮಾ ಕ್ಯಾಂಪ್) ವ್ಯಾಪ್ತಿಯ ಆರೋಗ್ಯ ಮಾತೆ ದೇವಾಲಯ, ಬರ್ಮಾ ಕ್ಯಾಂಪ್ ನಲ್ಲಿ ಕ್ರಿಸ್ತ ಜಯಂತಿಯನ್ನು ಭಕ್ತಿಭಾವ, ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಲಾಯಿತು. ಈ ಪವಿತ್ರ ಕಾರ್ಯಕ್ರಮವನ್ನು ಧರ್ಮ ಕೇಂದ್ರದ ಗುರುಗಳಾದ ಫಾದರ್ ರೆವರೆಂಡ್ ಪಿ.ಜೆ. ಹೃದಯ ರಾಜ್ ಅವರ ಮಾರ್ಗದರ್ಶನದಲ್ಲಿ ನಡೆಸಲಾಗಿದ್ದು, ಕ್ರಿಸ್ತ ಯೇಸುವಿನ ಜನನದ ಮಹತ್ವವನ್ನು ಸಾರುವ ಗೋಧಲಿ ಪ್ರಾರ್ಥನೆ ಹಾಗೂ ವಿಶೇಷ ಕ್ರಿಸ್‌ಮಸ್ ಸಂದೇಶವನ್ನು ನೀಡಲಾಯಿತು.**

ಕಾರ್ಯಕ್ರಮದಲ್ಲಿ ದೇವಾಲಯದ ಪಾಲನಾ ಸಮಿತಿ ಸದಸ್ಯರು, ಭಕ್ತರು ಹಾಗೂ ಸ್ಥಳೀಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಪ್ರೀತಿ, ತ್ಯಾಗ, ಸೇವೆ ಮತ್ತು ಸಹೋದರತ್ವದ ಸಂದೇಶವನ್ನು ಮನಗಂಡರು.



ಕ್ರಿಸ್ತ ಯೇಸುವಿನ ಜನನವು ಮಾನವೀಯ ಮೌಲ್ಯಗಳನ್ನು ಬಲಪಡಿಸುವ ಮಹತ್ವದ ಸಂದೇಶವಾಗಿದ್ದು, ಸಮಾಜದಲ್ಲಿ ಶಾಂತಿ ಮತ್ತು ಏಕತೆಯನ್ನು ಉತ್ತೇಜಿಸುತ್ತದೆ ಎಂದು ಫಾದರ್ ರೆವರೆಂಡ್ ಪಿ.ಜೆ. ಹೃದಯ ರಾಜ್ ಅವರು ತಮ್ಮ ಸಂದೇಶದಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಬಾದರ್ಲಿ ಹಂಪನಗೌಡ ಅವರು ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕಳುಹಿಸಿ, ಬರ್ಮಾ ಕ್ಯಾಂಪ್ ಪ್ರದೇಶದಲ್ಲಿ ಎಲ್ಲಾ ಧರ್ಮಗಳ ನಡುವೆ ಇರುವ ಸಹಬಾಳ್ವೆ, ಪರಸ್ಪರ ಗೌರವ ಮತ್ತು ಸೌಹಾರ್ದತೆಯನ್ನು ಇನ್ನಷ್ಟು ಬಲಪಡಿಸುವಂತೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರೆಹಮದ್ ಪಾಷಾ, ಗ್ರಾಮ ಪಂಚಾಯಿತಿಯ ಸರ್ವ ಸದಸ್ಯರು, ಆರ್. ಎಚ್. ನಂಬರ್ ವನ್ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಯ ಸಿಬ್ಬಂದಿಗಳು, ಮತ್ತು ಗ್ರಾಮ ಪಂಚಾಯಿತಿ ಸದಸ್ಯರಾದ ಲಾಜರ್ ಸಿರಿಲ್ ಅವರು ಕ್ರಿಸ್ತ ಜಯಂತಿಯ ಅಂಗವಾಗಿ ಕ್ರೈಸ್ತ ಸಮುದಾಯದ ಎಲ್ಲರಿಗೂ ಹಾರ್ದಿಕ ಶುಭಾಶಯಗಳನ್ನು ಕೋರಿದರು. ಕ್ರಿಸ್‌ಮಸ್ ಹಬ್ಬವು ಗ್ರಾಮದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಾಮಾಜಿಕ ಏಕತೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿ ಎಂದು ಅವರು ಆಶಿಸಿದರು. ಕ್ರಿಸ್ತ ಜಯಂತಿ ಆಚರಣೆ ಭಕ್ತರ ಹೃದಯಗಳಲ್ಲಿ ಸಂತಸ, ಭರವಸೆ ಮತ್ತು ಮಾನವೀಯ ಮೌಲ್ಯಗಳ ಸಂದೇಶವನ್ನು ಮೂಡಿಸಿ, ಸಮುದಾಯದ ಒಗ್ಗಟ್ಟಿಗೆ ದಿಟ್ಟ ಸಾಕ್ಷಿಯಾಯಿತು.

# ವಿಪಿಎಮ್ ಶಾಲೆಯಲ್ಲಿ ಅಂತರ ಧರ್ಮಿಯ ಸೌಹಾರ್ದ ಕೂಟ




❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ವಿಪಿಎಂ ಮತ್ತು ಸೆಕ್ರೆಡ್ ಹಾರ್ಟ್ ಇಂಗ್ಲೀಷ್ ಮಿಡಿಯಂ ಶಾಲೆಯಲ್ಲಿ ಕ್ರಿಸ್ತ ಜಯಂತಿಯ ಪ್ರಯುಕ್ತ ಸರ್ವ ಧರ್ಮ ಸಹಭಾಗಿತ್ವದಲ್ಲಿ ಅಂತರ ಧರ್ಮೀಯ ಸೌಹಾರ್ದ ಕೂಟವನ್ನು ಮಂಗಳವಾರ ಆಯೋಜಿಸಲಾಗಿತ್ತು.**

ಅಧ್ಯಕ್ಷತೆಯನ್ನು ಬಿಜಾಪುರ ಜೆಸ್ವಿಟ್ ಎಜುಕೇಷನಲ್ & ಚಾರಿಟೇಬಲ್ ಸೊಸೈಟಿ, ವಿಜಯಪುರ ವಲಯ ಮುಖ್ಯಸ್ಥ ಸ್ವಾಮಿ ಸುನೀಲ್ ಫೆರ್ನಾಂಡಿಸ್ ಯೇ.ಸ. ವಹಿಸಿ ಮಾತನಾಡಿ, ಎಲ್ಲ ಧರ್ಮಗಳ ತಿರುಳೊಂದೇ ಆಗಿದ್ದು ಅದು ಪ್ರೀತಿ ಶಾಂತಿ ಮತ್ತು ಮಾನವೀಯತೆಯೇ ಆಗಿದೆ ಎಂದರು. ಕ್ಷೇತ್ರ ಸಮನ್ವಯ ಅಧಿಕಾರಿ ಆರ್.ಬಿ. ಧಮ್ಮೂರ್ಮಠ ಮಾತನಾಡಿ, ಸರ್ವಧರ್ಮ ಸಮಾನತೆ ಮತ್ತು ಪರಸ್ಪರ ಗೌರವ ಸಮಾಜದ ಸುಸ್ಥಿರತೆಗೆ ಅಗತ್ಯವಾಗಿದೆ ಎಂದರು.

ಸಭೆಯಲ್ಲಿ ಗುಂಡಕನಾಳ ಗಡಿ ಸೊಮನಾಳ ಬೃಹನ್ಮಠದ ಗುರುಲಿಂಗ ಶಿವಾಚಾರ್ಯರು ಮಾತನಾಡಿ,ವಿದ್ಯಾರ್ಥಿಗಳು ಸಹಬಾಳ್ವೆ ಮತ್ತು ಸಾಮಾಜಿಕ ಜವಾಬ್ದಾ–ರಿಯನ್ನು ಅರಿತು ಮುನ್ನಡೆಯಬೇಕು ಎಂದರು. ವೇದಿಕೆಯಲ್ಲಿ ಸಿ.ಆರ್.ಪಿ. ರಾಜಸಿಂಗ ವಿಜಯಪುರ, ಬಿ.ಆರ್.ಪಿ ಕಾಶಿನಾಥ ಸಜ್ಜನ, ಕರುಣಾಮಯ ಇನ್ ಫ್ರಾ, ಮುದ್ದೆಬಿಹಾಳ್ ಮಾಲೀಕ ಪ್ರಸಾದ್ ಗಟ್ಟಿ, ಉದ್ಯಮಿದಾರ ಶ್ರೀಶೈಲ್ ದೊಡ್ಡಮನಿ ಉಪಸ್ಥಿತರಿರುವರು ಎಂದು ವಿಪಿಎಂ ಮತ್ತು ಸೆಕ್ರೆಡ್ ಹಾರ್ಟ್ ಇಂಗ್ಲೀಷ್ ಮಿಡಿಯಂ ಶಾಲೆಯ ಸಂಚಾಲಕ ಸ್ವಾಮಿ ಸುನೀಲ್ ಅಂದ್ರಾದೆ ಇದ್ದರು.

# ಬಳಗಾನೂರಿನ ಪ್ರತಿಭೆ ಜಪಾನ್‌ಗೆ ಹಾರಿದ ಕಥೆ: ಮಂಜುನಾಥ್ ಅವರ ಸಾಧನೆಯ ಹಾದಿ!

## ಬಬ್ರುವಾಹನ ಬಸಣ್ಣನವರ ಮೊಮ್ಮಗನ ಜಪಾನ್ ಜಯಭೇರಿ: ಬೆಂಗಳೂರಿನಿಂದ ಟೋಕಿಯೋವರೆಗೆ ಮಂಜುನಾಥ್ ಪಯಣ

❑ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಡಿ,25:–ಕಲೆ ಮತ್ತು ಸಾಹಿತ್ಯದ ತವರೂರು ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಬಳಗಾನೂರು. ಇಲ್ಲಿನ ಮಣ್ಣಿನಲ್ಲಿ ಎಂತಹ ಪ್ರತಿಭೆಗಳಿವೆ ಎಂಬುದಕ್ಕೆ ಈ ಯುವಕನೇ ಸಾಕ್ಷಿ. ರಂಗಭೂಮಿಯಲ್ಲಿ 'ಬಬ್ರುವಾಹನ' ಪಾತ್ರದ ಮೂಲಕ ಪರಕಾಯ ಪ್ರವೇಶ ಮಾಡಿ ಮನೆಮಾತಾಗಿದ್ದ ಬಸಣ್ಣನವರ ಮೊಮ್ಮಗ, ಅಜಾತಶತ್ರು ರಾಜಕಾರಣಿ ಮಹಾಬಳೇಶ ಹಡಪದರ ಪುತ್ರ ಮಂಜುನಾಥ ಬಳಗಾನೂರು ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಂಚಿ ತಾಯ್ನಾಡಿಗೆ ಮರಳುತ್ತಿದ್ದಾರೆ.**

"ಬದುಕಿನ ಕನಸು ಹೊತ್ತು ರಾಜಧಾನಿ ಬೆಂಗಳೂರಿಗೆ ಕಾಲಿಟ್ಟ ಮಂಜುನಾಥ್, ಪ್ರತಿಷ್ಠಿತ 'ಟೊಯೋಟಾ' ಕಂಪನಿಯಲ್ಲಿ ಸುದೀರ್ಘ ಸೇವೆ ಸಲ್ಲಿಸುತ್ತಿದ್ದಾರೆ. ಕೇವಲ ಕೆಲಸಕ್ಕಷ್ಟೇ ಸೀಮಿತವಾಗದ ಇವರು, ತಮ್ಮ ವಿಶೇಷ




ಜ್ಞಾನದಿಂದ ಕಾರ್ಮಿಕರಿಗೆ ಕೆಲಸದ ಸಮಯದಲ್ಲಿ ಆಗಬಹುದಾದ ಪ್ರಾಣಾಪಾಯಗಳನ್ನು ತಪ್ಪಿಸುವ ಅದ್ಭುತ ತಂತ್ರಜ್ಞಾನವನ್ನು ಕಂಡುಹಿಡಿದರು. ಇವರ ಈ ಚಾಕಚಕ್ಯತೆಯನ್ನು ಕಂಡ ಕಂಪನಿಯು ಇವರನ್ನು ಜಪಾನ್ ದೇಶಕ್ಕೆ ತರಬೇತಿಗಾಗಿ ಆಯ್ಕೆ ಮಾಡಿತು." "ಕಳೆದ ಹತ್ತು ತಿಂಗಳುಗಳಿಂದ ಉದಯ ಸೂರ್ಯನ ನಾಡು ಜಪಾನ್‌ನಲ್ಲಿ ತಂತ್ರಜ್ಞಾನದ ಸುಧಾರಿತ ಪಾಠಗಳನ್ನು ಕಲಿತ ಮಂಜುನಾಥ್, ಈಗ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಹೊಸ ಅನುಭವಗಳೊಂದಿಗೆ ಭಾರತಕ್ಕೆ ಮರಳುತ್ತಿದ್ದಾರೆ.

ಕಾರ್ಮಿಕರ ಸುರಕ್ಷತೆ ಮತ್ತು ಕಂಪನಿಯ ಬೆಳವಣಿಗೆಯ ನಡುವೆ ಸಮತೋಲನ ಸಾಧಿಸಿದ ಇವರ ಸಾಧನೆ ನಿಜಕ್ಕೂ ಅಭಿನಂದನೀಯ." "ಮಗ ವಿದೇಶದಿಂದ ಸಾಧನೆ ಮಾಡಿ ಬರುತ್ತಿದ್ದಾನೆ



ವಿದೇಶದಿಂದ ಸ್ವದೇಶಕ್ಕೆ ಆಗಮಿಸುತ್ತಿರುವ ಮಂಜುನಾಥರವರಿಗೆ ಸಹೋದರಿಯರಾದ ಶ್ರೀಮತಿ ಈರಮ್ಮ/ಅಮರೇಶ ಮತ್ತು ಶ್ರೀಮತಿ ಗೀತಾ/ಸುರೇಶ ರವರಿಂದ ಹೃದಯಪೂರ್ವಕ ಸ್ವಾಗತ.

ಎನ್ನುವ ಹೆಮ್ಮೆ ಒಂದು ಕಡೆಯಾದರೆ, ಹತ್ತು ತಿಂಗಳಿಂದ ದೂರವಿದ್ದ ಮಗನನ್ನು ನೋಡುವ ತವಕ ಮತ್ತೊಂದು ಕಡೆ. ತಂದೆ ಮಹಾಬಳೇಶ ಹಡಪದರು, ತಾಯಿ ಮತ್ತು ಬಳಗಾನೂರಿನ ಸಮಸ್ತ ಸಂಬಂಧಿಕರು ಮಂಜುನಾಥರನ್ನು ಸ್ವಾಗತಿಸಲು ಕಾತರದಿಂದ ಕಾಯುತ್ತಿದ್ದಾರೆ." "ಸರಳ ಸಜ್ಜನಿಕೆಯ ಕಲಾವಿದನ ಮಗನಾಗಿ,ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡುತ್ತಿರುವ ಮಂಜುನಾಥ ಬಳಗಾನೂರು ಅವರ ಈ ಯಶೋಗಾಥೆ ನಾಡಿನ ಯುವಜನತೆಗೆ ಮಾದರಿ. ಜಪಾನ್‌ನಿಂದ ಮರಳಿ ಬರುತ್ತಿರುವ ಈ ಸಾಧಕನಿಗೆ ನಮ್ಮ ಕಡೆಯಿಂದಲೂ ಹಾರ್ದಿಕ ಸ್ವಾಗತ."

# ಅಂತಿಮ ಆಯ್ಕೆ ಪಟ್ಟಿಯಲ್ಲಿ ಗ್ರಾಮೀಣ ಪ್ರದೇಶ ಯುವಕರು ಅಗ್ನಿ ವೀರ ಸೇನೆಗೆ ಆಯ್ಕೆ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಗ್ರಾಮೀಣ ಪ್ರದೇಶದ ಸರಕಾರಿ ಕನ್ನಡ ಶಾಲೆಗಳಲ್ಲಿ ಅಭ್ಯಾಸ ಮಾಡಿದ ಅಪ್ಪಟ ಹಳ್ಳಿಯ ಯುವಕರು ರಾಯಚೂ–ರಿನಲ್ಲಿ ನಡೆದ ಅಗ್ನಿವೀರ್ ಸೇನಾ ನೇಮಕಾತಿಯಲ್ಲಿ ನೇಮಕವಾಗಿ ತಾಲೂಕಿನ ಹಾಗೂ ಗ್ರಾಮೀಣ ಪ್ರದೇಶದ ಸರಕಾರಿ ಶಾಲೆಗಳ ಘನತೆ ಹೆಚ್ಚಿಸಿದ್ದಾರೆ.**

ಸರಕಾರಿ ಶಾಲೆಗಳ ಮುಖ್ಯೋಪಾಧ್ಯಾಯರು ಹರ್ಷ ವ್ಯಕ್ತಪಡಿಸಿದ್ದಾರೆ. ಜೊತೆಗೆ ಈಗ ಈ ಯುವಕರು ಪ್ರತಿಷ್ಠಿತ ಸರಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಪದವಿಯಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಈ ಯುವಕರು ಅಭ್ಯಾಸದ ಜೊತೆಗೆ ವ್ಯವಸಾಯದಲ್ಲಿಯೂ ಕೂಡ ತಂದೆಯವರ ಜೊತೆಗೆ ಸಹಾಯ ಮಾಡು ತ್ತಿದ್ದರು. ಸೈನಿಕ ಹುದ್ದೆಗೆ ನೇಮಕವಾದ ಯುವಕರು ಚೆನ್ನಬಸವ ನಾಯಕ ಬ್ಯಾಗವಾಟ,ರಾಮಚಂದ್ರ ಕನ್ನೇರಿ ನೀರಮಾನ್ವಿ, ಭೀಮಣ್ಣ ನಾಯಕ ರಾಜಲದಿನ್ನಿ, ಶಿವಕುಮಾರ ನಾಯಕ ನಕ್ಕುಂದಿ,

ಯಲ್ಲಪ್ಪ ಕರಡಿ ಆಲ್ದಾಳ ಹಾಗೂ ಬೀರಪ್ಪ ಕೊರವಿ ಈ ಎಲ್ಲಾ ಹಳ್ಳಿಯ ಯುವಕರು ಕಠಿಣ ಪೂರ್ವ ತರಬೇತಿ ಅತ್ಯಂತ ಯಶಸ್ವಿಗೊಳಿಸಲೆಂದು ಮಾನ್ವಿ ತಾಲೂಕಿನ ದೇಶಭಕ್ತರು ತಾಲೂಕ ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷರಾದ ಆಂಜನೇಯ ನಸಲಾಪುರ ಹಾಗೂ ಅಂಬಣ್ಣ ನಾಯಕ ಗುಜ್ಜಲ್ ರಾಜ್ಯಾಧ್ಯಕ್ಷರು ಕರ್ನಾಟಕ ರಾಜ್ಯ ಬೇಡರ ಸಮಿತಿ ಬೆಂಗಳೂರು ಹಾಗೂ ಕಾರ್ಯಕಾ–ರಿಣಿ ಸಮಿತಿ ಸದಸ್ಯರು ಶುಭ ಹಾರೈಸಿದ್ದಾರೆ.

# ಸುಶಿಕ್ಷತ ವರ್ಗವೇ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ದೂಡುತ್ತಿದೆ ಅಕ್ಬರ್ ಅಲಿ ಉಡುಪಿ

❑ ನೈಜ್ಯ ದೆಸೆ ನ್ಯೂಸ್

**ಕೊಡೇಕಲ್ಲ: ಶಿಕ್ಷಣ ಹಾಗೂ ಹಣದ ವ್ಯಾಮೋಹದೊಂದಿಗೆ ಬದುಕುತ್ತಿರುವ ಸಮಾಜಘಾತುಕರು , ಶಿಕ್ಷಣದಲ್ಲಿ ಪಾಂಡಿತ್ಯವನ್ನು ಗಳಿಸಿದ ಕೆಲವರು ಇಂದು ತನ್ನ ತಂದೆ ತಾಯಿಯರನ್ನು ವೃದ್ಧಾಶ್ರಮಕ್ಕೆ ದೂಡುತ್ತಿದ್ದಾರೆ. ಬಹುತೇಕ ದೊಡ್ಡ ದೊಡ್ಡ ನಗರಗಳಲ್ಲಿ ಜನರು ತಂದೆ ತಾಯಿಯರನ್ನು ನೋಡದೆ ನಾಯಿಗಳನ್ನು ಸಾಕುವ ಪ್ರಸಂಗ ಕಾಣಸಿಗುತ್ತಿದೆ ಎಂದು ನಾಡಿನ ಖ್ಯಾತ ವಾಗ್ಮಿಗಳು ಚಿಂತಕರು ಆದಂತಹ ಶ್ರೀ ಅಕ್ಬರ್ ಅಲಿ ಉಡುಪಿ ರವರು ಹೇಳಿದರು.**

ಪರಮ ಪೂಜ್ಯಶ್ರೀ ಬಸವರಾಜಯ್ಯ ಅಪ್ಪನವರ 71ನೇ ಪುಣ್ಯಾರಾಧನೆ ಅಂಗವಾಗಿ ನಡೆದ ಧರ್ಮ ಸಭೆ ಹಾಗೂ ಗೌರವ ಸನ್ಮಾನ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಉಪನ್ಯಾಸವನ್ನು ನೀಡಿದರು. ಮಠ ಮಂದಿರ ಮಸೀದಿಗಳಲ್ಲಿ ಚರ್ಚ್ ಗಳಲ್ಲಿ ಧರ್ಮದ ಬೋಧನೆಯನ್ನು ಸರಿಯಾದ ರೀತಿಯಲ್ಲಿ ಮಾಡುವ ಅವಶ್ಯಕತೆ ಇದೆ. ಧರ್ಮಗಳು ಬಂದದ್ದು ಮನಸ್ಸನ್ನು ಜೋಡಿಸಲಿಕ್ಕಾಗಿ ವಿನಃ ಮನಸ್ಸನ್ನು




ಹೊಡೆಯುವ ಕೆಲಸ ಧರ್ಮಗಳು ಎಂದಿಗೂ ಮಾಡುವುದಿಲ್ಲ. ಇಂದು ಧರ್ಮದ ಹೆಸರಿನಲ್ಲಿ ಜಾತಿ ಹೆಸರಿನಲ್ಲಿ ಪರಸ್ಪರರಲ್ಲಿ ಹಗೆತನ ದ್ವೇಷ ಅರಾಜಕತೆ ಕೀಳು ಮೇಲು ಎಂಬ ಮನಸ್ಥಿತಿ ಕಾಣಸಿಗುತ್ತಿದೆ ಇಂತಹ ಮನೋಭಾವ ನಮ್ಮ ಸಮೀಪವು ಬರುದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ನುಡಿದರು. ಸಮಾಜ ಸುಧಾರಣೆಯಾಗಬೇಕಾದರೆ ನಮ್ಮ ಕುಟುಂಬ ಸುಧಾರಿಸಬೇಕು,

ನಮ್ಮ ಕುಟುಂಬ ಸುಧಾ–ರಿಸಬೇಕಾದರೆ ನಮ್ಮ ಮನೆಯವರ ಸಂಸ್ಕಾರ ಸುಧಾರಣೆಯಾಗಬೇಕು.ಮುಂದುವರೆದು ಮಾತನಾಡಿದ ಅವರು. ಮನೆಯಲ್ಲಿ ಪ್ರೀತಿ ಮಮತೆಯಿಂದ ಎಲ್ಲರೂ ಕಾಣಬೇಕು. ಒಬ್ಬ ಪತಿ ತನ್ನ ಪತ್ನಿಗೆ ರಾಜನಾಗಬೇಕು ಒಬ್ಬ ಪತ್ನಿ ತನ್ನ ಪತಿಗೆ ರಾಣಿ ಆಗಬೇಕು. ಯಾವತ್ತಿಗೂ ಪತಿಗೆ ಕೂಲಿ ಕಾರ್ಮಿಕ ಎಂದು ತಿಳಿದುಕೊಂಡರೆ ಕೂಲಿ ಕಾರ್ಮಿಕನ ಹೆಂಡತಿಯು ಕೂಡ ಕೂಲಿ ಕಾರ್ಮಿಗಳಾಗುತ್ತಾಳೆ. ಮನೆ ಸುಧಾ–ರಿಸಿತು ಎಂದಾಗ ಕುಟುಂಬ ಸುಧಾರಿಸತ್ತದೆ ಇದೇ ಕುಟುಂಬದಿಂದ ಸಮಾಜ ಸುಧಾರಣೆ ಆಗುತ್ತದೆ.

ತಮ್ಮನ್ನು ತಾವು ಸಜ್ಜನರು ಎಂದು ತಿಳಿದುಕೊಳ್ಳುವವರು ಕೆಡುಕುಗಳನ್ನು ನೋಡಿಯೂ ನೋಡದ ಹಾಗೆ ಇದ್ದರೆ ತಮ್ಮ ಕೈಲಾದಷ್ಟು ಪಾಪ ಕಾರ್ಯಗಳನ್ನು ತಡೆಯದೆ ಇದ್ದರೆ ನಿಜವಾದ ಸಮಾಜಘಾತಕರಾಗುತ್ತಾರೆ. 15ನೇ ಶತಮಾನದಲ್ಲಿ ಕೊಡೆಕಲ್ ಬಸವಣ್ಣನವರು ಜಗತ್ತಿಗೆ ಸರಿಯಾದ ಮಾರ್ಗವನ್ನು ನೀಡಲು ಇವೆಲ್ಲ ಕೆಡುಕುಗಳ ವಿರುದ್ಧ ಅಸಮಾನತೆಯ ವಿರುದ್ಧ ಒಂದು ಸತ್ಯದ ಮಾರ್ಗವನ್ನು ತೋರಿಸಿ ಹೋಗಿದ್ದಾರೆ. ಅವರು ಕೇವಲ ವಚನಗಳಿಂದ ಹೇಳಿದ್ದಲ್ಲ ಬದಲಾಗಿ ನಡೆದು ತೋರಿಸಿದ್ದಾರೆ. ಎಂದು ಹೇಳಿದರು. ಕಾರ್ಯಕ್ರಮದಲ್ಲಿ ದೇಶಕ್ಕಾಗಿ ಪ್ರಾಣವನ್ನು ವ್ಯಯಿಸಿದ ವೀರಯೋಧ ಹನುಮಂತಪ್ಪ ಕೊಪ್ಪದ್ ರವರ ಧರ್ಮಪತ್ನಿ ಹಾಗೂ ರಾಯಚೂರಿನಲ್ಲಿ ಸುಮಾರು ಹತ್ತು ಸಾವಿರಗಳಿಗಿಂತ ಹೆಚ್ಚು ಗಿಡಗಳನ್ನು ನೆಟ್ಟಿರುವಂತಹ ಪರಿಸರ ಪ್ರೇಮಿ ಶ್ರೀ ವೀರಣ್ಣ ಕೊಸ್ಗಿ ರವರಿಗೆ ವಿಶೇಷ ಸನ್ಮಾನವನ್ನು ಮಾಡಲಾಯಿತು.

ಮಹಲಿನಮಠದ ಬಸವ ಪೀಠಾಧಿಪತಿಗಳಾದಂತಹ ಪರಮಪೂಜ್ಯ ಶ್ರೀ ವೃಷಭೇಂದ್ರ ಅಪ್ಪನವರು ದಿವ್ಯ ಸಾನಿಧ್ಯವನ್ನು ವಹಿಸಿಕೊಂಡಿದ್ದರು. ವಿರಕ್ತಮಠದ ಪರಮಪೂಜ್ಯ ಶ್ರೀ ನೀಲಕಂಠ ಸ್ವಾಮೀಜಿಗಳು ಹಾಗೂ ಆದಿಶಕ್ತಿ ಪೀಠ ಎಣ್ಣಿವಡಿಗೇರಿಯ ಪೀಠಾಧಿಪತಿಗಳಾಗಿರುವ ಶ್ರೀ ಶಿವಯ್ಯ ಸ್ವಾಮಿಗಳು ಸಾನಿಧ್ಯವನ್ನು ವಹಿಸಿಕೊಂಡಿದ್ದರು. ರಾಜ ಮನೆತನದ ರಾಣಿ ಶ್ರೀಮತಿ ರಂಗಮ್ಮ ಜಹಾಗಿರದಾರರು ಹಾಗೂ ವೆಂಕಟಪ್ಪನಾಯಕ ಜಹಾಗಿರದಾರರು ಅಧ್ಯಕ್ಷೀಯ ಸ್ಥಾನವನ್ನು ಅಲಂಕರಿಸಿದ್ದರು ಮಾಜಿ ಸಚಿವರು ಮತ್ತು ಬಿಜೆಪಿ ರಾಜ್ಯ ಉಪಾಧ್ಯಕ್ಷರಾಗಿರುವಂತಹ ಶ್ರೀಯುತ ನರಸಿಂಹ ನಾಯಕ (ರಾಜು ಗೌಡ) ಅಧ್ಯಕ್ಷೀಯ ನುಡಿಗಳನ್ನಾಡಿದರು. ಗಣ್ಯರಾದ ಬಸವರಾಜ ಬದ್ರಗೋಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಸಂಗಣ್ಣ ಪಂಜಗಲ್ ನಿರೂಪಿಸಿ ಒಂದಿಸಿದರು.

## ನೇಮಕಾತಿ ಪ್ರಕಟಣೆ

NFSU ನೇಮಕಾತಿ 2025 5 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಓಈಖಗ ನೇಮಕಾತಿ 2025: 5 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯವು ಡಿಸೆಂಬರ್ 2025 ರ ಓಈಖಗ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಧಾರವಾಡ ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 28–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಓಈಖಗ ಹುದ್ದೆಯ ಅಧಿಸೂಚನೆ ಸಂಸ್ಥೆಯ ಹೆಸರು: ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯ (NFSU) ಪೋಸ್ಟ್‌ಗಳ ಸಂಖ್ಯೆ: 5 ಉದ್ಯೋಗ ಸ್ಥಳ: ಧಾರವಾಡ – ಕರ್ನಾಟಕ ಪೋಸ್ಟ್ ಹೆಸರು: ಸಹಾಯಕ ಪ್ರಾಧ್ಯಾಪಕ ಅಧಿಕೃತ ವೆಬ್‌ಸೈಟ್: nfsu.ac.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 08–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28–ಡಿಸೆಂಬರ್–2025

# ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಪಲ್ಸ್ ಪೋಲಿಯೋ ಕಾರ್ಯಕ್ರಮ: ಶೇ.101 ಗುರಿ ಸಾಧನೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಆಯೋಜಿಸಲಾದ ಪಲ್ಸ್ ಪೋಲಿಯೋ ಕಾರ್ಯಕ್ರಮವು ಕೊನೆಯ ದಿನದಂದು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡಿತು. ಈ ಕಾರ್ಯಕ್ರಮದ ಮೂಲಕ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗಬಾರದು ಎಂಬ ಉದ್ದೇಶದೊಂದಿಗೆ ಆರೋಗ್ಯ ಇಲಾಖೆ ಸಮರ್ಪಕ ಯೋಜನೆ ಹಾಗೂ ಕಾರ್ಯಾಚರಣೆಯನ್ನು ಕೈಗೊಂಡಿತ್ತು.**




ಈ ಕಾರ್ಯಕ್ರಮದಲ್ಲಿ ಗುರಿಯಾಗಿದ್ದ 8,290 ಮಕ್ಕಳಿಗೆ ಮತ್ತು 15,912 ಮನೆಗಳಿಗೆ ಪಲ್ಸ್ ಪೋಲಿಯೋ ಲಸಿಕೆ ತಲುಪಿಸುವ ಗುರಿ ಹೊಂದಲಾಗಿತ್ತು. ಕಾರ್ಯಕ್ಷೇತ್ರದಲ್ಲಿ ನಡೆದ ತೀವ್ರ ಮನೆ?ಮನೆ ಭೇಟಿ, ಮರುಭೇಟಿ ಹಾಗೂ ಮೇಲ್ವಿಚಾರಣೆಯ ಫಲವಾಗಿ 8,377 ಮಕ್ಕಳಿಗೆ ಮತ್ತು 15,917 ಮನೆಗಳಿಗೆ ಪಲ್ಸ್ ಪೋಲಿಯೋ ಲಸಿಕೆ ನೀಡಲಾಗಿದ್ದು, ಇದರೊಂದಿಗೆ ಶೇ.101 ಸಾಧನೆ ಮಾಡಲಾಗಿದೆ. ಇದು ನಗರ ಪ್ರಾಥ–ಮಿಕ ಆರೋಗ್ಯ ಕೇಂದ್ರದ ಕಾರ್ಯಕ್ಷಮತೆ ಹಾಗೂ ಆಶಾ ಕಾರ್ಯಕರ್ತರ ಅಕ್ಷಯ ಶ್ರಮವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.

ಈ ಕುರಿತು ಮಾತನಾಡಿದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾ–ರಿಗಳಾದ ಡಾ. ಮೇರಿ ಭಂಡಾರಿ ಅವರು, "ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಯಾವುದೇ ಮಗು ಲಸಿಕೆಯಿಂದ ತಪ್ಪಿಸಿಕೊಳ್ಳಬಾರದು ಎಂಬ ಧ್ಯೇಯದೊಂದಿಗೆ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತರು ಹಾಗೂ ವ್ಯಾಕ್ಸಿನೇಟ–ರ್‌ಗಳು ಸಮರ್ಪಣೆಯಿಂದ ಕೆಲಸ ಮಾಡಿದ್ದಾರೆ. ಸಾರ್ವಜನಿಕರ ಸಹಕಾರದಿಂದ ಶೇ.101 ಗುರಿ ಸಾಧಿಸಲು ಸಾಧ್ಯವಾಗಿದೆ" ಎಂದು ತಿಳಿಸಿದರು.

ಕಾರ್ಯಕ್ರಮದ ಅನುಷ್ಠಾನ ಮತ್ತು ಮೇಲ್ವಿಚಾರಣೆಯಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶ್ರೀ ಹನುಮಂತ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಕಮಲ, ಆಶಾ ಕಾರ್ಯಕರ್ತರಾದ ಹುಲಿಗೆಮ್ಮ, ಕವಿತಾ ಸೇರಿದಂತೆ ಇತರ ಆರೋಗ್ಯ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸಿದ್ದರು. ಮನೆ?ಮನೆಗೆ ಭೇಟಿ ನೀಡಿ, ಮೊದಲ ಹಂತದಲ್ಲಿ ಲಸಿಕೆ ಪಡೆಯದೆ ಉಳಿದ ಮಕ್ಕಳನ್ನು ಗುರುತಿಸಿ ಅವರಿಗೆ ಲಸಿಕೆ ಹಾಕುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಯಿತು. ಮಕ್ಕಳನ್ನು ಪೋಲಿಯೋ ಮುಕ್ತಗೊಳಿಸುವ ರಾಷ್ಟ್ರೀಯ ಉದ್ದೇಶದೊಂದಿಗೆ ಆರೋಗ್ಯ ಇಲಾಖೆ ಕೈಗೊಂಡಿರುವ ಈ ಪಲ್ಸ್ ಪೋಲಿಯೋ ಕಾರ್ಯಕ್ರಮವು ಸಾರ್ವಜನಿಕ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಮಹತ್ವದ ಸಾಧನೆಯಾಗಿದ್ದು, ಮುಂದಿನ ದಿನಗಳಲ್ಲಿಯೂ ಇದೇ ಉತ್ಸಾಹ ಮತ್ತು ಜವಾಬ್ದಾರಿಯೊಂದಿಗೆ ಕಾರ್ಯ ಮುಂದುವರಿಸಲಾಗುವುದು

## ಪೆರಿಫೆರಲ್ ರಿಂಗ್ ರೋಡ್ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಶುರು

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಬೆಂಗಳೂರು ಪೆರಿಫೆರಲ್ ರಿಂಗ್ ರೋಡ್ (ಪಿಆರ್‌ಆರ್–1) ಯೋಜನೆಗಾಗಿ ಭೂಮಾಲಿಕ–ರಿಂದ ಸಮ್ಮತಿ ಪತ್ರಗಳು ಸ್ವೀಕೃತವಾಗುತ್ತಿದ್ದಂತೆ, ಭೂಸ್ವಾಧೀನ ಪ್ರಕ್ರಿಯೆಯು ತ್ವರಿತಗತಿಯಲ್ಲಿ ಆರಂಭವಾಗಿದೆ. ಸಂಧಾನಿತ ಮೊತ್ತ ಆಯ್ಕೆ ಮಾಡಿಕೊಳ್ಳುವವರಿಗೆ ಪ್ರತಿ ಎಕರೆಗೆ ನೀಡಲಾಗುವ ಪರಿಹಾರ ಮೊತ್ತದ ವಿವರಗಳನ್ನು ಹಾಗೂ ಟಿಡಿಆರ್ (ಅಭಿವೃದ್ಧಿ ಹಕ್ಕುಗಳ ವರ್ಗಾವಣೆ) ವಿವರಗಳನ್ನೂ ಒಳಗೊಂಡಂತೆ ನಮ್ಮ ಅಧಿಕೃತ ವೆಬ್‌ಸೈಟ್ http:/engaluruBusi-**



**nessCorridor.com** ನಲ್ಲಿ ಗ್ರಾಮವಾರು ಪ್ರಕಟಿಸಲಾಗಿದೆ.

ಬೆಂಗಳೂರು ಪೆರಿಫೆರಲ್ ರಿಂಗ್ ರೋಡ್ (ಪಿಆರ್‌ಆರ್–1) ಯೋಜನೆಗಾಗಿ ಪ್ರಸ್ತುತ ಸ್ವಾಧೀನಪಡಿಸಿಕೊಳ್ಳುತ್ತಿರುವ ಜಮೀನು ಹೆಚ್ಚಾಗಿ ಕೃಷಿ ಭೂಮಿಯಾಗಿದ್ದರೂ ಸಹ, ಟಿಡಿಆರ್ ಅನ್ನು ನಗರ ಭೂ ಪರಿವರ್ತಿತ ಮೌಲ್ಯದ ಆಧಾರದ ಮೇಲೆ (ಪ್ರತಿ ಚದರ ಅಡಿ ಲೆಕ್ಕಾಚಾರದಲ್ಲಿ) ನೀಡಲಾಗುತ್ತಿದೆ. ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರವಾಗಿ ಜಮೀನನ್ನು ಆಯ್ಕೆ ಮಾಡಿಕೊಳ್ಳುವವ–ರಿಗೆ ವಸತಿ ನಿವೇಶನದ ಅಳತೆಯು ಕೇವಲ 60:40 ಅನುಪಾತಕ್ಕೆ ಸೀಮಿತವಾಗಿರುವುದಿಲ್ಲ. ಇದು ಭೂಮಿಯ ಮಾರ್ಗದರ್ಶಿ ಮೌಲ್ಯವನ್ನು(ಗೈಡೆನ್ಸ್ ವ್ಯಾಲ್ಯೂ) ಅವಲಂಬಿಸಿರುತ್ತದೆ. ಎಲ್ಲಿ ಮಾರ್ಗದರ್ಶಿ ಮೌಲ್ಯ ಹೆಚ್ಚಿದೆಯೋ, ಅಲ್ಲಿ ಭೂಮಾಲಿಕರು ಶೇ. 40 ಕ್ಕಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನಗಳನ್ನು ಪಡೆಯಲು ಅವಕಾಶವಿರುತ್ತದೆ. ನಾಲ್ವರು ಜಿಲ್ಲಾಧಿಕಾರಿಗಳ ನೇಮಕ ಸಂಧಾನಿತ ಮೊತ್ತದ ಶೀಘ್ರ ಅನುಮೋದನೆಗಾಗಿ ಬಿಡಿಎ ಆಯುಕ್ತ ಮಣಿವಣ್ಣನ್ ಅವರು ನಾಲ್ವರು ಜಿಲ್ಲಾಧಿಕಾರಿಗಳನ್ನು(ಭೂಸ್ವಾಧೀನ) ನೇಮಿಸಿದ್ದಾರೆ. ಐದರಲ್ಲಿ ಒಂದು ರೀತಿಯ ಪರಿಹಾರದ ಆಯ್ಕೆಗಾಗಿ ಭೂಮಾಲಿಕರು @BDAOffi cialGok ಅಥವಾ @Bc_Ben-galuru ಸಂಪರ್ಕಿಸಲು ಕೋರಲಾಗಿದೆ. ನೀವು ದಾಖಲೆಗಳನ್ನು ಸಲ್ಲಿಸಿದ 15 ದಿನಗಳ ಒಳಗಾಗಿ ನಗದು ಪರಿಹಾರದ ಇತ್ಯರ್ಥ ಅಥವಾ ತಾತ್ಕಾಲಿಕ ಟಿಡಿಆರ್ ಅರ್ಹತಾ ಪ್ರಮಾಣಪತ್ರ ಅಥವಾ ವಾಣಿಜ್ಯ/ವಸತಿ ಭೂಮಿಯ ಅರ್ಹತಪತ್ರವನ್ನು ನೀಡಲಾಗುವುದು ಎಂದು ಬಿಡಿಎ ಮೂಲಗಳು ತಿಳಿಸಿದೆ. ಪರಿಹಾರ ವಿವರ ತಿಳಿದುಕೊಳ್ಳುವುದು ಹೇಗೆ? ಪಿಆರ್‌ಆರ್ ಹಂತ–1ಕ್ಕಾಗಿ ಭೂಸ್ವಾಧೀನಗೊಳ್ಳುತ್ತಿರುವ ಗ್ರಾಮಗಳ ಭೂಮಾಲಿಕರಿಗೆ ನೀಡಲಾಗುವ ಪರಿಹಾರದ ಸಂಪೂರ್ಣ ವಿವರಗಳನ್ನು http:/engaluruBusinessCorridor.com ಮೂಲಕ ಪಡೆಯಬಹುದು. ಹಳೆಯ ಪರಿಹಾರದ ದರಗಳ ಜೊತೆಗೆ, ನೂತನ ಪರಿಹಾರದ ಆಯ್ಕೆಗಳಿಗೆ ಸಂಬಂಧಿಸಿದ ವಿವರಗಳನ್ನೂ ಸಹ ಒದಗಿಸಲಾಗಿದೆ. ಹೋಬಳಿವಾರು ಗ್ರಾಮಗಳಿಗೆ ನಿಗದಿಪಡಿಸಿರುವ ಪರಿಹಾರವನ್ನು ಸುಲಭವಾಗಿ ಇಲ್ಲಿ ಪರಿಶೀಲಿಸಬಹುದು. ವದಂತಿಗೆ ಕಿವಿಗೊಡಬೇಡಿ: ರಮಾರಿಂಗ್ ರೋಡ್ ಯೋಜನೆಗೆ ಭೂಮಿ ಕೊಡುವ ಮಾಲಿಕರು ಮತ್ತು ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ, ಅಧಿಕೃತ ವೆಬ್‌ಸೈಟ್ ಮೂಲಕವೇ ಅಥವಾ ಸಂಬಂಧಿತ ಅಧಿಕಾರಿಗಳಿಂದಲೇ ನಿಖರವಾದ ಮಾಹಿತಿ ಪಡೆದುಕೊಳ್ಳುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಮನವಿ ಮಾಡಿದ್ದಾರೆ. ವಸತಿ, ವಾಣಿಜ್ಯ ಭೂಮಿಗೆ ಪರಿಹಾರ ದರ ನಿಗದಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಪ್ರತಿ ಎಕರೆಗೆ 2.50 ಕೋಟಿ ರೂ.ನಿಂದ 15.60 ಕೋಟಿ ರೂ. ವರೆಗೆ ಪರಿಹಾರ ನಿಗದಿಪಡಿಸಲಾಗಿದೆ. ವಾಣಿಜ್ಯ ಫ್ಲ್ಯಾಟ್‌ಗಳಿಗೆ, ಪ್ರತಿ ಚದರ ಅಡಿಗೆ ಸರಿಸುಮಾರು 8,385 ರೂ. ದರ ನಿಗದಿ ಪಡಿಸಲಾಗಿದೆ. ಸಕ್ಷಮ ಮತ್ತು ಸ್ಥಳೀಯ ಅಧಿ ಕಾರಿಗಳು ವಸತಿ ಫ್ಲ್ಯಾಟ್‌ಗಳಿಗೆ ನಿಗದಿಪಡಿಸಿದ ದರಗಳಿಗೆ ಅನುಗುಣವಾಗಿ, ಅಧಿಸೂಚಿತ ಭೂಮಿಯ ಮಾರ್ಗದರ್ಶನ ಮೌಲ್ಯವನ್ನು ಆಧರಿಸಿ ಪರಿಹಾರ ನಿರ್ಧರಿಸಲಾಗುತ್ತದೆ.

# ಸಿಂಧನೂರಿಗೆ ಡಿ.28 ರಂದು ಜಲ ಜನ ಜಾಗೃತಿ ಸ್ವಾಭಿಮಾನ ನಿರ್ಮಲ ತುಂಗಭದ್ರಾ ಅಭಿಯಾನ



ನಿರ್ಮಲ ತುಂಗಭದ್ರಾ ಅಭಿಯಾನ ಸಿಂಧನೂರು

❑ ನೈಜ್ಯ ದೆಸೆ ನ್ಯೂಸ್

**ತಾಲೂಕಿಗೆ ಡಿಸೆಂಬರ್ 28ಕ್ಕೆ ಪ್ರವೇಶ ಮಾಡಲಿದ್ದು, ಅಂಬಾಮಠ, ಗೋರೆಬಾಳ, ಸಿಂಧನೂರು, ಹಾಗೂ ಜವಳಗೇರಾದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಂದು ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದರು.**

ತುಂಗಭದ್ರಾ ಜಲಾಶಯ ಹಾಗೂ ಕಾಲುವೆ ನೀರು ಕಲುಷಿತಗೊಂಡಿದ್ದು, ಕುಡಿಯಲು ಯೋಗ್ಯವಾಗಿಲ್ಲ. ಇದರಿಂದಾಗಿ ಜಲಜಾಗೃತಿ, ಜನ ಜಾಗೃತಿ, ರಾಷ್ಟ್ರೀಯ ಸ್ವಾಭಿಮಾನ ನವದೆಹಲಿ ಪರ್ಯಾವರಣ ಟ್ರಸ್ಟ್ ಶಿವಮೊಗ್ಗ, ನಿರ್ಮಲ ತುಂಗಭದ್ರಾ ಸಮಿತಿ ಕರ್ನಾಟಕ ಮೂರನೇ ಹಂತದ ನಿರ್ಮಲ ತುಂಗಭದ್ರಾ ಅಭಿಯಾನ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ.

ಈ ಆಂದೋಲನ ಪಾದಯಾತ್ರೆ ದಿನಾಂಕ ಡಿಸೆಂಬರ್ 28 ರಂದು ಸಿಂಧನೂರು ತಾಲೂಕಿನಲ್ಲಿ ಪ್ರವೇಶ ಮಾಡಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಲು ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿದರು.

# ಸೇಂಟ್ ಮೇರಿಸ್ ಚರ್ಚ್‌ನಲ್ಲಿ ಕ್ರಿಸ್‌ಮಸ್ ಹಬ್ಬದ ಶುಭಾಶಯ ಕೋರಿದ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕೋನಾಪುರ ಪೇಟೆಯಲ್ಲಿನ ಸೇಂಟ್ ಮೇರಿಸ್ ಚರ್ಚ್‌ನಲ್ಲಿ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಸೇಂಟ್ ಮೇರಿಸ್ ಚರ್ಚ್‌ ಫಾ. ಸುರೇಶ್ ವಿನ್ಸೆಂಟ್ ಹಾಗೂ ಫಾದರ್ ವಸಂತ್ ರವರಿಗೆ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಕ್ರಿಸ್‌ಮಸ್ ಹಬ್ಬದ ಶುಭಾಶಯವನ್ನು ಕೋರಿ ಮಾತನಾಡಿ ಕ್ರಿಸ್‌ಮಸ್ ಹಬ್ಬವು ಶಾಂತಿ,**

ಪ್ರೀತಿ ಹಾಗೂ ಮಾನವೀಯ ಮೌಲ್ಯಗಳನ್ನು ಸಾರುವ ಮಹತ್ವದ ಹಬ್ಬವಾಗಿದ್ದು, ಎಲ್ಲ ಧರ್ಮಗಳ ನಡುವೆ ಸೌಹಾರ್ದತೆ ಮತ್ತು ಸಹಬಾಳ್ವೆಯನ್ನು ಬಲಪಡಿಸುತ್ತದೆ ಎಂದು ತಿಳಿಸಿದರು.



ಜೆಡಿಎಸ್ ಪಕ್ಷದ ತಾ. ಅಧ್ಯಕ್ಷರಾದ ಈರಣ್ಣ ಮರ್ಲಟ್ಟಿ, ಹಿರಿಯ ಪುರಸಭೆ ಸದಸ್ಯರಾದ ರಾಜಾ ಮಹೇಂದ್ರ ನಾಯಕ, ತಾಲೂಕು ಜೆಡಿ–ಎಸ್. ರೈತ ಘಟಕದ ಅಧ್ಯಕ್ಷರಾದ ಶರಣಪ್ಪ ಗೌಡ ಮದ್ಲಾಪುರ, ಪುರಸಭೆ ಸದಸ್ಯರಾದ ಬಾಷಾ ಸಾಬ್, ಶರಣಪ್ಪ ಮೇದಾ, ಜೆಡಿಎಸ್ ತಾಲೂಕು ಮಹಾ ಪ್ರಧಾನ ಕಾರ್ಯದರ್ಶಿ ಪಿ. ರವಿಕುಮಾರ ವಕೀಲರು, ನಗರ ಘಟಕದ ಅಧ್ಯಕ್ಷರಾದ ಹೆಚ್. ಮೌನೇಶ್ ಗೌಡ, ಖಲೀಲ್ ಖುರೇಷಿ, ಮೌಲಾ ಸಾಬ್ ಸೇರಿದಂತೆ ಇನ್ನಿತರರು ಇದ್ದರು.

# ಕಾರ್ಮಿಕರೊಬ್ಬರ ಮಗಳು ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ

❑ ನೈಜ್ಯ ದೆಸೆ ನ್ಯೂಸ್

**ಕಾರಟಗಿ: ಬಡತನದ ಸವಾಲುಗಳ ಮಧ್ಯೆಯೇ ಓದುವ ಛಲ ಹೊಂದಿದ್ದ ಕಾರ್ಮಿಕರೊಬ್ಬರ ಮಗಳು ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಗಳಿಸುವ ಮೂಲಕ ಚಿನ್ನದ ಪದಕದೊಂದಿಗೆ ನಗೆ ಬೀರಿದ್ದಾರೆ.ಪಟ್ಟಣದ ಕಸ್ತೂರಬಾ ಮಹಿಳಾ ಪದವಿ ಮಹಾವಿದ್ಯಾಲಯದ ಬಿ.ಕಾಂ ವಿದ್ಯಾರ್ಥಿನಿ ಕೆ.ರೇಖಾ ಪರಶುರಾಮ ಅವರು ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಿಂದ ನಡೆದ ಪರೀಕ್ಷೆಯಲ್ಲಿ ಶೇ 95.6ರಷ್ಟು ಅಂಕ ಗಳಿಸಿ, ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.**



ವಿದ್ಯಾರ್ಥಿನಿಯ ತಂದೆ ಪರಶುರಾಮ ಕೂಲಿ ಕಾರ್ಮಿಕ. ಬಡ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮೂವರು ಹೆಣ್ಣು ಮಕ್ಕಳನ್ನು ಓದಿಸುತ್ತಾ ದೈನಂದಿನ ಬದುಕು ಕಟ್ಟಿಕೊಂಡಿದ್ದಾರೆ. ವಿದ್ಯಾರ್ಥಿನಿ ರೇಖಾ ಸವಾಲುಗಳನ್ನು ಮೆಟ್ಟಿನಿಂತು ನಿರಂತರ ಅಧ್ಯಯನ, ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ಗುರಿ ತಲುಪುವಲ್ಲಿ ಯಶಸ್ವಿಯಾಗಿದ್ದಾರೆ. ವಿದ್ಯಾರ್ಥಿನಿ ರೇಖಾಗೆ ಕಾಲೇಜಿನ ಶುಲ್ಕ ಭ–ರಿಸುವುದೇ ಸವಾಲಾಗಿ, ವಿದ್ಯಾಭ್ಯಾಸವನ್ನೇ ನಿಲ್ಲಿಸುವ ಸ್ಥಿತಿ ಎದುರಾಗಿ–ತ್ತು. ಇದೆಲ್ಲವನ್ನೂ ಮೆಟ್ಟಿನಿಂತು ಚಿನ್ನದ ಪದಕದ ಕಿರೀಟವನ್ನು ಇದೀಗ ಹೊತ್ತಿದ್ದಾರೆ.

ವಿದ್ಯಾರ್ಥಿನಿ ರೇಖಾ ಪ್ರತಿಕ್ರಿಯಿಸಿ,'ನಿರಂತರ ಅಧ್ಯಯನ, ಉಪನ್ಯಾಸಕರ ಮಾರ್ಗದರ್ಶನದಿಂದ ಗುರಿ ಸಾಧಿಸಲು ಸಾಧ್ಯವಾಗಿದೆ. ಅವರೆಲ್ಲರಿಗೂ ಸದಾ ಋಣಿಯಾಗಿರುತ್ತೇನೆ' ಎಂದರು. ಕಾಲೇಜಿನ ಆಡಳಿತ ಮಂಡಳಿ ಮುಖ್ಯಸ್ಥರು, ಉಪನ್ಯಾಸಕರು ವಿದ್ಯಾರ್ಥಿನಿ ರೇಖಾ ಅವರ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

# ಸಾಲುಮರದ ತಿಮ್ಮಕ್ಕಳ ಕಾರ್ಯ ಮಾದರಿಯಾಗಲಿ: ಶಾಸಕ ನಾಡಗೌಡ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮಕ್ಕಳಿಲ್ಲದ ಕೊರಗನ್ನು ಮರೆತು ಸಾವಿರಾರು ಮರಗಳನ್ನು ನೆಟ್ಟು ಅವುಗಳನ್ನು ಪೋಷಿಸಿ ಸ್ವಂತ ಮಕ್ಕಳಂತೆ ಬೆಳೆಸಿದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕಳ ಪರಿಸರ ಕಾಳಜಿ ನಮ್ಮೆಲ್ಲರಿಗೂ ಮಾದರಿ ಯಾಗಬೇಕಾಗಿದೆ ಎಂದು ಶಾಸಕ,ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ(ಅಪ್ಪಾಜಿ) ಹೇಳಿದರು.**

ಗುರುವಾರ ಹಸಿರು ಸಂಪದ ಬಳಗದ ವತಿಯಿಂದ ಪಟ್ಟಣದ 5 ಮತ್ತು6 ನೇ ವಾರ್ಡಿನ ಉದ್ಯಾನವನದಲ್ಲಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹಸಿರು ಸಂಪದ ಬಳಗದ ಪದಾಧಿಕಾರಿಗಳು ಪಟ್ಟಣದ ಜನರಲ್ಲಿ ಪರಿಸರ ಪ್ರಜ್ಞೆ ಜಾಗೃತಿಗೊಳಿಸುವ ಕಾರ್ಯವನ್ನು



ಮಾಡುತ್ತಿರುವುದು ಸಂತೋಷದ ವಿಷಯ ಅವರಿಗೆ ತಾವೆಲ್ಲರೂ ಸಹಕರಿಸಬೇಕು. ಪಟ್ಟಣವನ್ನು ಹಸಿರನ್ನಾಗಿಸುವಲ್ಲಿ ಸಾಮುದಾಯಿಕ ಭಾಗವಹಿಸಿಕೆಯು ಅಷ್ಟೇ ಮುಖ್ಯವಾಗಿದೆ ಮುಂದಿನ ದಿನಗಳಲ್ಲಿ ಈ ಎರಡು ವಾರ್ಡ್‌ಗಳ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಕಾರ್ಯ ಮಾಡಲಾಗುವುದು ಇದರಲ್ಲಿ ಯಾವುದೇ ರೀತಿಯ ರಾಜಕೀಯ ಹಸ್ತಕ್ಷೇಪದ ಅಗತ್ಯವಿಲ್ಲ, ಇಡೀ ಪಟ್ಟಣದ ಅಭಿವೃದ್ಧಿಗೆ ನಾನು ಬದ್ಧನಾಗಿರುವೆ ಈ ಉದ್ದೇಶಕ್ಕಾಗಿಯೇ ಕಳೆದ ಐದು ದಿನಗಳಿಂದ ಪಟ್ಟಣದ ಪ್ರವಾಸಿನಲ್ಲಿದ್ದೇನೆ ಪಟ್ಟಣದಲ್ಲಿ ಒಂದು ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಾಣದ ಬೇಡಿಕೆಯನ್ನು ಇಡಲಾಗಿದೆ ಇದನ್ನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮಾತನಾಡಿ ಕ್ರಮ ವಹಿಸಲು ಪ್ರಯತ್ನಿಸುತ್ತೇನೆ ಎಂದರು. ಕರವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈ ಭೀಮ ಮುತ್ತಗಿ ಪ್ರಸ್ತಾವಿಕವಾಗಿ ಮಾತನಾಡಿದರು.

ಈ ಸಮಯದಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ್ ಅಹಮದ್ ಖಾಜಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಪಿಎಸ್ಐ ಜ್ಯೋತಿ ಖೋತ್, ಅರಣ್ಯಾ ಧಿಕಾ–ರಿಗಳಾದ ಬಸನಗೌಡ ಬಿರಾದಾರ, ಗಿರೀಶ್ ಹಲಕುಡೆ, ಹಸಿರು ಸಂಪದ ಬಳಗದ ಅಧ್ಯಕ್ಷ ಡಾ.ವಿಜಯಕುಮಾರ ಕಾರ್ಚಿ,ಉಪಾಧ್ಯಕ್ಷ ಪ್ರಭುಗೌಡ ಮದರಕಲ್ಲ,ಸಂಚಾಲಕ ಎಸ್. ಎಸ್.ಗಡೇದ, ಶ್ರೀಕಾಂತ್ ಪತ್ತಾರ, ಪ್ರಶಾಂತ ಜನಾದ್ರಿ, ಮುಖಂಡರಾದ ಸಿದ್ದನಗೌಡ ಪಾಟೀಲ ನಾವದಗಿ,ನೀಲಮ್ಮಗೌಡತಿ ಪಾಟೀಲ, ಶರಣು ಧಣಿ,ಸಂಗನಗೌಡ ಅಸ್ಕಿ, ಮೆಹಬೂಬ ಕೆಂಭಾವಿ, ಬಸನಗೌಡ ಜೈನಾಪೂರ, ಜೈಸಿಂಗ್ ಮೂಲಿಮನಿ, ಇಬ್ರಾಹಿಂ ಮನ್ಸೂರ್, ಮಹೆಬೂಬ ಲಾಹೋರಿ, ಮಹೆಬೂಬಶಾ ಮಕಾನದಾರ, ಮುದ್ದು ಪಟೇಲ, ಶಫೀಕ್ ಇನಾಮದಾರ, ಸದ್ದಾಮ್ ಹೊನ್ನಳ್ಳಿ, ಮೋದಿನ ನಗಾರ್ಚಿ, ಅಶ್ರಫ್ ಜಮಾದಾರ, ರಿಯಾಜ್ ಮುಲ್ಲಾ, ಜಾವೇದ ಕೆಂಭಾವಿ, ಇಕ್ಬಾಲ್ ಆಗ್ರಾ, ಮುರ್ತುಜಾ ಜಮಾದಾರ, ಇಬ್ರಾಹಿಂ ಆರಬೋಳ, ಪುರಸಭೆ ಸಿಬ್ಬಂದಿಗಳು ಹಾಗೂ ವಾರ್ಡ್ ನಿವಾಸಿಗಳು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD in Homoeopathic Materia Medica

ಹೋಮಿಯೋಪತಿ ಮೆಟೀರಿಯಾ ಮೆಡಿಕಾದಲ್ಲಿ ಎಂಡಿ ಒಂದು ವಿಶೇಷ ಸ್ನಾತಕೋತ್ತರ ಕಾರ್ಯಕ್ರಮವಾಗಿದ್ದು, ಇದು ಹೋಮಿಯೋಪತಿ ಔಷಧಿಗಳು, ಅವುಗಳ ಗುಣಲಕ್ಷಣಗಳು ಮತ್ತು ಕ್ಲಿನಿಕಲ್ ಅನ್ವಯಿಕೆಗಳ ಆಳವಾದ ಅಧ್ಯಯನದ ಮೇಲೆ ಕೇಂದ್ರೀಕರಿಸುತ್ತದೆ. ಈ ಕೋರ್ಸ್ ಅನ್ನು ಭಾರತದಲ್ಲಿ ರಾಷ್ಟ್ರೀಯ ಹೋಮಿಯೋಪತಿ ಆಯೋಗ (NCH) ನಿಯಂತ್ರಿಸುತ್ತದೆ ಮತ್ತು ಸಾಮಾನ್ಯವಾಗಿ ಮೂರು ವರ್ಷಗಳವರೆಗೆ ಇರುತ್ತದೆ. ಅವಧಿ: 3 ವರ್ಷಗಳು, ಒಂದು ವರ್ಷದ ಕಡ್ಡಾಯ ಮನೆ ಕೆಲಸ/ಇಂಟರ್ನ್‌ಶಿಪ್ ಸೇರಿದಂತೆ.ಅರ್ಹತೆ: ಅಭ್ಯರ್ಥಿಗಳು ಊಅಅ ಕಾಯ್ದೆಯ ಎರಡನೇ ವೇಳಾಪಟ್ಟಿಯಲ್ಲಿ ಸೇ-ರಿಸಲಾದ ಮಾನ್ಯತೆ ಪಡೆದ ಸಂಸ್ಥೆಯಿಂದ ಹೋಮಿಯೋಪತಿ ಔಷಧ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಪದವಿ (BHMS) ಹೊಂದಿರಬೇಕು.ಪ್ರವೇಶ ಪ್ರಕ್ರಿಯೆ: ಪ್ರವೇಶವು ಪ್ರಾಥಮಿಕವಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ನಡೆಸುವ ಅಖಿಲ ಭಾರತ ಆಯುಷ್ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿ (AIAPGET) ಪಡೆದ ಅಂಕಗಳನ್ನು ಆಧ-ರಿಸಿದೆ, ನಂತರ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಕೆಲವು ಸಂಸ್ಥೆಗಳು ನಿರ್ವಹಣಾ ಕೋಟಾ ಸೀಟುಗಳನ್ನು ಸಹ ನೀಡುತ್ತವೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಔಷಧ ವ್ಯತ್ಯಾಸ, ಪ್ರಕರಣ ವಿಶ್ಲೇಷಣೆ, ರೆಪರ್ಟೋರಿಯಲ್ ತಂತ್ರಗಳು, ಸಂಶೋಧನಾ ವಿಧಾನ ಮತ್ತು ಜೈವಿಕ ಅಂಕಿಅಂಶಗಳಲ್ಲಿ ಪರಿಣತಿಯನ್ನು ಒದಗಿಸುವ ಮೂಲಕ ಪ್ರವೀಣ ವೈದ್ಯರು, ಸಂಶೋಧಕರು ಮತ್ತು ಶಿಕ್ಷಕರಾಗಲು ತರಬೇತಿ ನೀಡುತ್ತದೆ. ಹೋಮಿಯೋಪತಿಕ್ ಮೆಟೀರಿಯಾ ಮೆಡಿಕಾದ ವಿಜ್ಞಾನ ಮತ್ತು ತತ್ವಶಾಸ್ತ್ರ: ಹೋಮಿಯೋಪತಿಕ್ ಮೆಟೀ-ರಿಯಾ ಮೆಡಿಕಾದ ಮೂಲಭೂತ ತತ್ವಗಳು, ಸ್ವರೂಪ, ವ್ಯಾಪ್ತಿ ಮತ್ತು ವ್ಯಾಖ್ಯಾನವನ್ನು ಅರ್ಥಮಾಡಿಕೊಳ್ಳುವುದು. ಹೋಮಿಯೋಪತಿಕ್ ಮೆಟೀರಿಯಾ ಮೆಡಿಕಾದ ಮೂಲಗಳು: ವಿಷಪೂರಿತ ವರದಿಗಳು ಮತ್ತು ಕ್ಲಿನಿಕಲ್ ಅವಲೋಕನಗಳಂತಹ ಇತರ ಮೂಲಗಳೊಂದಿಗೆ ಹ್ಯಾನೆಮನ್ ವಿವರಿಸಿದ ಔಷಧ ಸಾಬೀತು ವಿಧಾನಗಳ ವಿವರವಾದ ಅಧ್ಯಯನ. ಹೋಮಿಯೋಪತಿಕ್ ಔಷಧಗಳ ಅಧ್ಯಯನ: ಪಾಲಿಕ್ರೆಸ್ಟ್ ಪರಿಹಾರಗಳು, ಕಡಿಮೆ-ತಿಳಿದಿರುವ ಔಷಧಗಳು, ನೊಸೋಡ್‌ಗಳು, ಸಾರ್ಕೋಡ್‌ಗಳು ಮತ್ತು ತಾಯಿಯ ಟಿಂಕ್ಚರ್‌ಗಳ ಆಳವಾದ ಅಧ್ಯಯನ, ಅವುಗಳ ನಿರ್ದಿಷ್ಟ ಔಷಧ ಚಿತ್ರಗಳು ಮತ್ತು ರೋಗಲಕ್ಷಣಗಳ ಮೇಲೆ ಕೇಂದ್ರೀಕರಿಸುವುದು. ತುಲನಾತ್ಮಕ ಮತ್ತು ಅನ್ವಯಿಕ ಮೆಟೀರಿಯಾ ಮೆಡಿಕಾ: ಇದೇ ರೀತಿಯ ಪರಿಹಾರಗಳ ನಡುವೆ ವ್ಯತ್ಯಾಸವನ್ನು ಕಲಿಯುವುದು ಮತ್ತು ಪೀಡಿಯಾಟ್ರಿಕ್ಸ್, ಶಸ್ತ್ರಚಿಕಿತ್ಸೆ ಮತ್ತು ಸ್ತ್ರೀರೋಗ ಶಾಸ್ತ್ರ ಸೇರಿದಂತೆ ವಿವಿಧ ಕ್ಲಿನಿಕಲ್ ಪರಿಸ್ಥಿತಿಗಳಲ್ಲಿ ಈ ಜ್ಞಾನವನ್ನು ಅನ್ವಯಿಸುವುದು. ಸಂಶೋಧನಾ ವಿಧಾನ ಮತ್ತು ಬಯೋಸ್ಟಾಟಿಸ್ಟಿಕ್ಸ್: ಸಂಶೋಧನಾ ವಿನ್ಯಾಸ, ಡೇಟಾ ಸಂಗ್ರಹಣೆ ಮತ್ತು ವಿಶ್ಲೇಷಣೆ, ಪುರಾವೆ ಆಧಾರಿತ ಔಷಧ ತತ್ವಗಳು ಮತ್ತು ವೈಜ್ಞಾನಿಕ ವಿಚಾರಣಾ ಮನೋಭಾವವನ್ನು ಬೆಳೆಸಲು ಪ್ರಬಂಧ ಬರವಣಿಗೆಯಲ್ಲಿ ತರಬೇತಿ. ಕ್ಲಿನಿಕಲ್ ತರಬೇತಿ: ಹಾಸಿಗೆಯ ಪಕ್ಕದಲ್ಲಿ ಜ್ಞಾನದ ಪ್ರಾಯೋಗಿಕ ಅನ್ವಯಿಕೆ, ಕೇಸ್ ಟೇಕಿಂಗ್, ರೋಗಲಕ್ಷಣ ವಿಶ್ಲೇಷಣೆ ಮತ್ತು ಮೌಲ್ಯಮಾಪನ, ಮೈಯಾಸ್ಮ್ಯಾಟಿಕ್ ವಿಶ್ಲೇಷಣೆ ಮತ್ತು ಸರಿಯಾದ ಪ್ರಕರಣ ನಿರ್ವಹಣೆ ಸೇರಿದಂತೆ. ಖಾಸಗಿ ಚಿಕಿತ್ಸಾಲಯಗಳು, ಸರ್ಕಾರಿ/ಖಾಸಗಿ ಆಸ್ಪತ್ರೆಗಳು ಅಥವಾ ಡಾ. ಬಾತ್ರಾ ಅವರಂತಹ ವಿಶೇಷ ಹೋಮಿಯೋಪತಿ ಕೇಂದ್ರಗಳಲ್ಲಿ ವೈದ್ಯ ಅಥವಾ ಸಲಹೆಗಾರರಾಗಿ ಕೆಲಸ ಮಾಡುವುದು.ಶೈಕ್ಷಣಿಕ: ಹೋಮಿಯೋಪತಿ ವೈದ್ಯಕೀಯ ಕಾಲೇಜುಗಳಲ್ಲಿ ಉಪನ್ಯಾಸಕ ಅಥವಾ ಪ್ರಾಧ್ಯಾಪಕರಾಗಿ ವೃತ್ತಿಜೀವನವನ್ನು ಮುಂದುವರಿಸುವುದು.ಸಂಶೋಧನೆ: ಹೊಸ ಔಷಧ ಸೂತ್ರೀಕರಣಗಳನ್ನು ಕಂಡುಹಿಡಿಯಲು ಮತ್ತು ಅಸ್ತಿತ್ವದಲ್ಲಿರುವವುಗಳನ್ನು ಮೌಲ್ಯೀಕರಿಸಲು ಸಂಶೋಧಕರಾಗಿ ಕೆಲಸ ಮಾಡುವುದು, ಹೆಚ್ಚಾಗಿ ಆಯುಷ್ ಸಚಿವಾಲಯದ ಅಡಿಯಲ್ಲಿ ಸರ್ಕಾರಿ ಅನುದಾನಿತ ಸಂಶೋಧನಾ ಸಂಸ್ಥೆಗಳಲ್ಲಿ. ಸಾರ್ವಜನಿಕ ಆರೋಗ್ಯ: ಔಷಧ ಲಭ್ಯತೆ ಮತ್ತು ಸಮುದಾಯ ಕಲ್ಯಾಣವನ್ನು ಸುಧಾರಿಸಲು ಸಾರ್ವಜನಿಕ ಆರೋಗ್ಯ ತಜ್ಞರಾಗಿ ಕೆಲಸ ಮಾಡುವುದು.

# ಮಾನ್ವಿ ದೈಹಿಕ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ಕಾರ್ಯಾಗಾರ :ಒತ್ತಡದ ಜೀವನ ಶೈಲಿಯಲ್ಲಿ ಪ್ರಥಮ ಚಿಕಿತ್ಸೆ ಮಾಹಿತಿ ಅತ್ಯಗತ್ಯ: ಚಂದ್ರಶೇಖರ ದೊಡ್ಡಮನಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಒತ್ತಡದ ಜೀವನ ಶೈಲಿಯಿಂದಾಗಿ ಬಹುತೇಕರಲ್ಲಿ ಒಂದಲ್ಲಾ ಒಂದು ರೀತಿಯ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದು ಪ್ರಥ-'ಮ ಚಿಕಿತ್ಸಾ ವಿಧಾನಗಳನ್ನು ಅನುಸರಿಸುವುದ-ರಿಂದ ಹೆಚ್ಚಿನ ಅಪಾಯಗಳನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ದೊಡ್ಡಮನಿ ಹೇಳಿದರು.**

ಪಟ್ಟಣದ ಬ್ರಾಹ್ಮಣವಾಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಬೆಂಗಳೂರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ರಾಯಚೂರು ಮತ್ತು ಕ್ಷೇತ್ರ ಶಿಕ್ಷಣಾಧಿಕಾ-ರಿಗಳ ಕಾರ್ಯಾಲಯ ಮಾನವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ದೈಹಿಕ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ಒಂದು ದಿನದ ಕಾರ್ಯಾಗಾರವನ್ನು ಸಸಿಗೆ ನೀರು ಎರೆದು ಉದ್ಘಾಟಿಸಿ ಮಾತನಾಡಿದ ಅವರು, ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ವಿಶೇಷವಾಗಿ ಮಾನ್ವಿ ತಾಲೂಕಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ಶಾಲೆಗಳಲ್ಲಿ ಉಪಯುಕ್ತವಾದ ಪ್ರಮುಖ ಮೂರು ಕಾರ್ಯಕ್ರಮಗಳನ್ನು ನೀಡಿದ್ದಾರೆ.



ಪ್ರಥಮವಾಗಿ ಶಾಲೆಗಳಲ್ಲಿ ವಿಜ್ಞಾನ ವಸ್ತುಗಳ ಪ್ರದರ್ಶನ ಮತ್ತು ಎಸ್‌ಎಸ್‌ಎಲ್ಸಿ ಫಲಿತಾಂಶ ಸುಧಾರಣೆಗಾಗಿ ವಿಜ್ಞಾನ ವಿಷಯ ಶಿಕ್ಷಕರಿಗೆ ತರಬೇತಿ ಕಾರ್ಯಾಗಾರ ಹಾಗೂ ದೈಹಿಕ ಶಿಕ್ಷಕರಿಗೆ ಪ್ರಥಮ ಚಿಕಿತ್ಸೆ ಕುರಿತು ಕಾರ್ಯಾಗಾರ ದಂತಹ ಮಹತ್ವದ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸರ್ಕಾರಿ ಶಾಲೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾರೆ ಎಂದು ಶ್ಲಾಘಿಸಿದರು. ಪ್ರಸ್ತುತ ದಿನಗಳಲ್ಲಿ ಪ್ರಥ-'ಮ ಚಿಕಿತ್ಸಾ ವಿಧಾನಗಳ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳುವದು ಅಗತ್ಯವಿದೆ.ವಿಶೇಷವಾಗಿ ದೈಹಿಕ ಶಿಕ್ಷಕರಿಗೆ ಇದರ ಮಾಹಿತಿ ತುಂಬಾ ಉಪಯುಕ್ತವಾಗಿದ್ದು, ಕ್ರೀಡೆಗಳ ಸಮಯದಲ್ಲಿ ಶಾಲಾ ಮಕ್ಕಳಲ್ಲಿ ಉಂಟಾಗುವ ಗಾಯಗಳು, ತಲೆ ಸುತ್ತು ವಿವಿಧ ಸಂದರ್ಭದಲ್ಲಿ ಮಕ್ಕಳಿಗೆ ಪ್ರಥಮ ಚಿಕಿತ್ಸೆಗಳ ವಿಧಾನ ಅಗತ್ಯವಾಗಿದೆ.

ಇದರ ಜ್ಞಾನ ಮಕ್ಕಳಿಗೂ ಅಗತ್ಯವಿದೆ. ಪ್ರಸ್ತುತ ಒತ್ತಡದ ಜೀವನದಲ್ಲಿ ಕಾಯಿಲೆಗಳು ಸಹಜವಾಗಿದ್ದೂ ಪ್ರಥಮ ಚಿಕಿತ್ಸಾ ವಿಧಾನಗಳನ್ನು ಅನುಸರಿಸುವುದರಿಂದ ಹೆಚ್ಚಿನ ಅಪಾಯಗಳನ್ನು ತಡೆಗಟ್ಟಲು ಸಾಧ್ಯವಿದೆ ಎಂದರು. ನಂತರ ಆರೋಗ್ಯ ಅಧಿಕಾರಿಗಳಾದ ಡಾ.ಶ್ರೀಧರ, ಡಾ.ಅಂಬಿಕಾ ಅವರು ಆಹಾರ ವಿಧಾನಗಳ ಮಹತ್ವ ಮತ್ತು ಅಗತ್ಯತೆ ಹಾಗೂ ಆಕಸ್ಮಿಕವಾಗಿ ಜರುಗುವ ಬೆಂಕಿಯಿಂದ ಸುಟ್ಟಗಾಯ, ತಲೆ ಸುತ್ತು, ಮೂರ್ಛೆ ಹೋಗುವಿಕೆ, ಕ್ರೀಡಾ ಸಮಯದಲ್ಲಿನ ಗಾಯಗಳು ಇತ್ಯಾದಿಗಳಿಗೆ ಅನುಸರಿಸಬೇಕಾದ ಪ್ರಥಮ ಚಿಕಿತ್ಸಾ ವಿಧಾನಗಳು ಬಗ್ಗೆ ಕಾರ್ಯಾಗಾರದಲ್ಲಿ ಸವಿವರವಾಗಿ ತಿಳಿಸಿಕೊಡಲಾಯಿತು. ನಂತರ ಕಾರ್ಯಾಗಾರದಲ್ಲಿ ವೈದ್ಯ ಅಧಿಕಾ-ರಿಗಳ ಡಾ.ಅಂಬಿಕಾ ಹಾಗೂ ಆರ್ಬಿ-ಎಸ್ಕೆ ವೈದ್ಯ ಅಧಿಕಾರಿ ಡಾ.ಶ್ರೀಧರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ತಾಲೂಕ ದೈಹಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ದೈ.ಶಿಕ್ಷಕರಾದ ಮಾರುತಿ, ನೂಡಲ್ ಅಧಿಕಾರಿ ಸಿದ್ಧಲಿಂಗೇಶ್ವರ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀಕಾಂತ್ ಬಾಗೇವಾಡಿ, ಮೌನೇಶ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ಧೈಹಿಕ ಶಿಕ್ಷಕರು ಭಾಗವಹಿಸಿದ್ದರು.

# ಪೌರ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಿಸಿದ ಶಾಸಕ ನಾಡಗೌಡ





ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರಿಗೆ ಸುರಕ್ಷತೆಗಾಗಿ ಕಿಟ್ ವಿತ-ರಿಸಲಾಗುತ್ತಿದೆ ಎಂದು ಮುದ್ದೇಬಿಹಾಳ ಶಾಸಕ ಸಿ ಎಸ್ ನಾಡಗೌಡ(ಅಪ್ಪಾಜಿ) ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ಪುರಸಭೆಯಿಂದ ಪೌರ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಿಸಿ ಅವರು ಮಾತನಾಡಿದರು.**

ಪೌರ ಕಾರ್ಮಿಕರು ಮಳೆ, ಚಳಿ, ಬಿಸಿಲು ಲೆಕ್ಕಿಸದೆ ಕಸ, ಚರಂಡಿ ಸ್ವಚ್ಛತೆ ಮಾಡುವ ಮೂಲಕ ಪಟ್ಟಣವನ್ನು ಸುಂದರವಾಗಿಡಲು ಶ್ರಮಿಸುತ್ತಿದ್ದಾರೆ. ಅವರ ಸುರಕ್ಷತೆ ಮತ್ತು ಆರೋಗ್ಯ ಕಾಪಾಡುವುದು ಪುರಸಭೆಯ ಕರ್ತವ್ಯ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರಿಗೂ ರಕ್ಷಣಾ ಸಲಕರಣೆ ನೀಡಲಾಗಿದೆ. ಪೌರ ಕಾರ್ಮಿಕರು ಸರ್ಕಾರದಿಂದ ವಿತರಿಸುವ ಸುರಕ್ಷತಾ ಕಿಟ್ ಅನ್ನು ಕಡ್ಡಾಯವಾಗಿ ಉಪಯೋಗಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದ ಅವರು ಸ್ವಚ್ಛತೆ ಕಾಪಾಡುವಲ್ಲಿ ಜನರ ಪಾತ್ರವೂ ಮುಖ್ಯವಾಗಿದೆ, ಸಮರ್ಪಕವಾಗಿ ಕಸ ವಿಲೇವಾರಿ ಮಾಡಲು ಸ್ಥಳೀಯ ಆಡಳಿತಕ್ಕೆ ಸಹಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಆರೋಗ್ಯಾಧಿಕಾರಿ ಫಿರೋಜ್ ಮುಲ್ಲಾ, ಮುಖಂಡರಾದ ಪ್ರಭುಗೌಡ ಮದರಕಲ್, ಸಿದ್ದನಗೌಡ ಪಾಟೀಲ ನಾವದಗಿ, ಶರಣು ಧಣಿ, ಸಂಗನಗೌಡ ಅಸ್ಕಿ, ಮೆಹಬೂಬ್ ಕೆಂಭಾವಿ, ಮೋದಿನ ನಗಾರ್ಚಿ, ಆಸೀಫ್ ಕೆಂಭಾವಿ, ಹಾಗೂ ಪುರಸಭೆ ಸಿಬ್ಬಂದಿಗಳು ಇದ್ದರು.

## ಶ್ರೀನಿವಾಸ್ ರಾಮಾನುಜನ್ ಕೊಡುಗೆ ಅಪಾರ'

ನೈಜ್ಯ ದೆಸೆ ನ್ಯೂಸ್

**ಶ್ರೀನಿವಾಸ್ ರಾಮಾನುಜನ್ ಒಬ್ಬ ಶ್ರೇಷ್ಠ ಗಣಿತಜ್ಞ, ಚಿಕ್ಕ ವಯಸ್ಸಿನಲ್ಲೇ ಅಪ್ರತಿಮ ಸಾಧನೆ ಮಾಡಿದ್ದಾರೆ. ಗಣಿತಕ್ಕೆ ಅವರ ಕೊಡುಗೆ ಅಪಾರವಾಗಿದೆ' ಎಂದು ಗಣಿತ ಶಿಕ್ಷಕ ಮರ್ದಾನಲಿ ಗಡಾದ ಹೇಳಿದರು. ಸಮೀಪದ ಬೆಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀನಿವಾಸ್ ರಾಮಾನುಜನ್ ಅವರ ಜನ್ಮ ದಿನದ ನಿಮಿತ್ತ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದರು.**



ಶಿಕ್ಷಕ ರವಿಕಿರಣ್ ಟಿಕಾರೆ ಮಾತನಾಡಿ, 'ಗಣಿತದ ಮಹತ್ವ, ರಾಮಾನುಜನ್ ಅವರ ಜೀವನ, ಸಾಧನೆ, ತಿಳಿಸುವ ಸಲುವಾಗಿ ಪ್ರತಿವರ್ಷ ಡಿ.22 ರಂದು ರಾಮಾನುಜನ್ ಅವರ ಜನ್ಮದಿನವನ್ನು ರಾಷ್ಟ್ರೀಯ ಗಣಿತ ದಿನ ಆಚರಿಸಲಾಗುತ್ತದೆ' ಎಂದರು. ಮುಖ್ಯಶಿಕ್ಷಕ ಪರಶುರಾಮ ಸಾಲ್ಮನಿ ಮಾತನಾಡಿ, 'ಗಣಿತ ವಿಷಯ ಕಬ್ಬಿಣದ ಕಡಲೆಯಲ್ಲ ಸತತ ಪರಿಶ್ರಮ ಹಾಗೂ ಅಭ್ಯಾಸದಿಂದ ಉತ್ತಮ ಅಂಕ ಗಳಿಸಲು ಸಾಧ್ಯ' ಎಂದರು. ಶಿಕ್ಷಕ ಗಿರಿಯಪ್ಪ ಹಾರನಹಳ್ಳಿ ಗಣಿತದ ಹನಿಗವನ ಗಳನ್ನು ವಾಚಿಸಿದರು. ಗಣಿತ ವಿಷಯಕ್ಕೆ ಸಂಬಂಧಿಸಿದಂತೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಶಿಕ್ಷಕರಾದ ಗಿರಿಯಪ್ಪ ಹಾರನಹಳ್ಳಿ, ರಾಜಾಸಾಬ್ ಬಳಿಗಾರ, ಪ್ರಕಾಶರೆಡ್ಡಿ ಗೋವಿಂದರೆಡ್ಡಿ, ನಾರಾಯಣಪ್ಪ ಬಿಸನಳ್ಳಿ, ಶಾಂತವೀರಯ್ಯ ಕಳ್ಳಿಮಠ, ಸುನೀತಾ ಯಾಳಗಿ, ಶ್ವೇತಾ ಹುಲ್ಲೂರ, ಪರಶುರಾಮ್ ಯಡವಟ್ಟಿ ಹಾಗೂ ಇತರರು ಇದ್ದರು.

# ಉತ್ತಮ ಆರೋಗ್ಯಕ್ಕೆ ಸಿರಿಧಾನ್ಯ ಸೇವನೆ ಅಗತ್ಯ: ಎಂ. ಹನುಮಂತಪ್ಪ

ನೈಜ್ಯ ದೆಸೆ ನ್ಯೂಸ್

**ಸಿರಿಧಾನ್ಯಗಳಿಗೆ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ । ಸಿರಿಧಾನ್ಯ ಬೆಳೆಯುವ ರೈತರಿಗೆ ಕೃವಿವಿ ಯಿಂದ ಮಾರ್ಗದರ್ಶನ । ಸಿರಿಧಾನ್ಯ ಮೌಲ್ಯವರ್ಧನೆ ಉತ್ತೇಜಿಸಲು ರೈತರಿಗೆ ತರಬೇತಿ**

**ರಾಯಚೂರು: 'ಆಧುನಿಕ ಆಹಾರ ಪದ್ದತಿ, ಒತ್ತಡದ ಜೀವನ ಶೈಲಿಯಿಂದ ಅನೇಕ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ ಉತ್ತಮ ಆರೋಗ್ಯಕ್ಕೆ ಸಿರಿಧಾನ್ಯ ಸೇವನೆ ಅಗತ್ಯ' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಂ. ಹನುಮಂತಪ್ಪ ಹೇಳಿದರು.**

ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ, ಜಿಲ್ಲಾ ಕೃಷಿಕ ಸಮಾಜ, ಕೃಷಿ ತಂತ್ರಜ್ಞರ ಸಂಸ್ಥೆ ವತಿಯಿಂದ ರೈತ ದಿನಾಚರಣೆ ಅಂಗವಾಗಿ ನಗರದ ಕೃಷಿ ವಿವಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಿರಿಧಾನ್ಯ ಹಾಗೂ ವಾಣಿಜ್ಯ ಮೇಳ ಉದ್ಘಾಟಿಸಿ ಅವರು ಮಾತನಾಡಿದರು. 'ಪೌಷ್ಟಿಕಾಂಶಗಳ ಆಗರವಾದ ಸಿರಿಧಾನ್ಯಗಳು ನವಣೆ, ರಾಗಿ, ಸಾಮೆ, ಬರಗು, ಕೊರಲೆ, ಜೋಳ ಸೇವನೆಯಿಂದ ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ಕಾಯಿಲೆ ನಿಯಂತ್ರಣ ಸಾಧ್ಯ ಎನ್ನುವುದು ಸಂಶೋಧನೆಗಳಿಂದ ದೃಢಪಟ್ಟಿದೆ.

ಸಿರಿಧಾನ್ಯಗಳು ಬರ ನಿರೋಧಕ ಶಕ್ತಿ ಹೊಂದಿದ್ದು, ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಕಡಿಮೆ ಖರ್ಚಿನಲ್ಲಿ ಉತ್ತಮ ಬೆಳೆ ಬೆಳೆಯಲು ಸಾಧ್ಯ ಮತ್ತು ಮಾರುಕಟ್ಟೆಯಲ್ಲಿ ಸಿರಿಧಾನ್ಯಗಳಿಗೆ ಹೆಚ್ಚಿನ ಬೇಡಿಕೆಯಿದ್ದು, ಅಧಿಕ ಲಾಭವೂ ಪಡೆಯಬಹುದು' ಎಂದರು. ಜಂಟಿ ಕೃಷಿ ನಿರ್ದೇಶಕ ಪ್ರಕಾಶ ಚವ್ಹಾಣ,'ಜಿಲ್ಲೆಯಲ್ಲಿ ಸಿರಿಧಾನ್ಯ ಬೆಳೆ ಉತ್ಪಾದನೆ ಹೆಚ್ಚಿಸಲು ಇಲಾಖೆ ಹಲವು ಯೋಜನೆಗಳನ್ನು



ರೂಪಿಸಿದೆ. ಕೃಷಿ ವಿಶ್ವವಿದ್ಯಾಲಯದ ಜೊತೆಯಲ್ಲಿ ಸಿರಿಧಾನ್ಯ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಉತ್ತೇಜಿಸುವ ಸಲುವಾಗಿ ಜಿಲ್ಲೆಯಾದ್ಯಂತ ವಿವಿಧ ರೈತ ಉತ್ಪಾದಕ ಸಂಘಗಳು ಮತ್ತು ಸ್ವ-ಸಹಾಯ ಗುಂಪುಗಳಿಗೆ ತರಬೇತಿಯ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ, ಕೆಪೆಕ್ ಹಾಗೂ ನಬಾರ್ಡನಿಂದ ಸಿಗುವ ಸೌಲಭ್ಯಗಳನ್ನು ಒದಗಿಸಿ ಗ್ರೇಡಿಂಗ್, ಪ್ಯಾಕಿಂಗ್, ಮತ್ತು ಮಾರುಕಟ್ಟೆಗೆ ಸಾಗಿಸಲು ಸಹಾಯ ಮಾಡುತ್ತಿದೆ ಎಂದು ತಿಳಿಸಿದರು.

ಆಡಳಿತ ಮಂಡಳಿ ಸದಸ್ಯ ಮಲ್ಲಿಕಾರ್ಜುನ ಡಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ವಿಜಯಕುಮಾರ,



ಜಿಲ್ಲಾಘಟಕದ ಅಧ್ಯಕ್ಷ ಸುರೇಂದ್ರಗೌಡ ಪಾಟೀಲ, ರಾಯಚೂರು ಘಟಕದ ಅಧ್ಯಕ್ಷ ಸಿದ್ಧಾರೆಡ್ಡಿ, ಸಿಂಧನೂರು ಘಟಕದ ಅಧ್ಯಕ್ಷ ಹೊನ್ನನಗೌಡ ಬೆಳಗುರ್ಕಿ, ಕೃಷಿ ವಿವಿಯ ಸಂಶೋಧನಾ ನಿರ್ದೇಶಕ ಅಮರೇಗೌಡ ಎ., ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ತಿಮ್ಮಣ್ಣ ನಾಯಕ, ಡಾ. ಬಸವಣ್ಣೆಪ್ಪ ಎಂ. ಎ, ಡಾ. ಉದಯಕುಮಾರ ನಿಡೋಣಿ, ಡಾ. ಅರುಣ ಕುಮಾರ್ ಹೊಸಮನಿ, ಕೃಷಿ ತಂತ್ರಜ್ಞ ಸಂಸ್ಥೆ ಅಧ್ಯಕ್ಷ ಆರ್. ಎ. ಪಾಟೀಲ, ಉಪ ನಿರ್ದೇಶಕ ನಯೀಮ್ ಹುಸೇನ್, ಮುತ್ತುರಾಜ್, ವಿಜ್ಞಾನಿಗಳಾದ ಶ್ರೀವಾಣಿ ಜಿ ಎನ್, ವೀಣಾ ಟಿ, ಸಹಾಯಕ ಕೃಷಿ ನಿರ್ದೇಶಕಿ ದೀಪಾ ಕುಲ್ಕರ್ಣಿ, ಶ್ರೀನಿವಾಸ ನಾಯಕ, ಮಲ್ಲಿಕಾರ್ಜುನ, ಸುಭಾನ್, ಸೊಹೆಲ್, ಸುನೀಲ್, ಅಮರೇಶ ಆಶಿಹಾಳ ಉಪಸ್ಥಿತರಿದ್ದರು.

# ಹಿರಿಯೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೀಕರ ಬಸ್ ಅಪಘಾತ


ನೈಜ್ಯ ದೆಸೆ ನ್ಯೂಸ್

**ಚಿತ್ರದುರ್ಗ: ಹಿರಿಯೂರು ಬಳಿ ರಾಷ್ಟ್ರೀಯ ಹೆದ್ದಾ-ರಿಯಲ್ಲಿ 09 ಜನರ ಜೀವ ಬಲಿ ಪಡೆದ ಭೀಕರ ಬಸ್ ಅಪಘಾತ ಸ್ಥಳಕ್ಕೆ ದಾವಣಗೆರೆ ಪೂರ್ವ ವಲಯದ ಐಜಿಪಿ ಡಾ.ಬಿ.ಆರ್. ರವಿಕಾಂತೇಗೌಡ ಅವರು ಇಂದು ಬೆಳಗ್ಗೆ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಈ ಖಾಸಗಿ ಬಸ್ ಗೆ ಕಂಟೇನರ್ ಲಾರಿ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ.**

ಘಟನೆ ವೇಳೆ ಲಾರಿಯಿಂದ ಗುದ್ದಿಸಿಕೊಂಡ ಖಾಸಗಿ ಬಸ್ ಹೊತ್ತಿ ಉರಿಯುವ ಮುನ್ನ ಅದೇ ದಾರಿಯಲ್ಲಿ ಪ್ರವಾಸಕ್ಕೆ ಹೊರಟಿದ್ದ ಶಾಲಾ ಮಕ್ಕಳಿದ್ದ ಬಸ್ ಗೂ ಡಿಕ್ಕಿ ಹೊಡೆದಿದೆ. ಆದರೆ ಅದೃಷ್ಟವಶಾತ್ ಮಕ್ಕಳಿಗೆ ಏನು ಆಗಿಲ್ಲ. ಶಾಲಾ ಮಕ್ಕಳ ಬಸ್ ಚಾಲಕನೇ ಘಟನೆಯ







ಪ್ರತ್ಯಕ್ಷದರ್ಶಿ ಎಂದು ಅವರು ತಿಳಿಸಿದರು. ಇಂದು (ಡಿ.24) ಬೆಳಗಿನ ಜಾವ ಸುಮಾರು 2 ಗಂಟೆಗೆ ಹೊತ್ತಿಗೆ ಬೆಂಗಳೂರಿನಿಂದ ಗೋಕರ್ಣಕ್ಕೆ ಹೊರಡುತ್ತಿದ್ದ ಸಿಬರ್ಡ್ ಖಾಸಗಿ ಬಸ್ ಅಪಘಾತಕ್ಕೀಡಾಗಿದೆ. ಹೈವೇಯಲ್ಲಿ ಎದುರಗಡೆಯಿಂದ ಬರುತ್ತಿದ್ದ ಕಂಟೇನರ್ ಲಾರಿಯು ಡಿವೈಡರ್ ಹತ್ತಿ ಈ ಬಸ್‌ಗೆ ಡಿಕ್ಕಿ ಹೊಡೆದಿದೆ. ವೇಗವಾಗಿ ಬಂದ ಕಂಟೇನರ್ ರಭಸವಾಗಿ ಬಸ್ ನ ಡೀಸೆಲ್ ಟ್ಯಾಂಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ತತ್‌ಕ್ಷಣಕ್ಕೆ ಬಸ್ ಬೆಂಕಿ ಹೊತ್ತಿಕೊಂಡಿದೆ. ಬೆಂಕಿಯ ಜ್ವಾಲೆ ಬಸ್ ತುಂಬಾ ಆವರಿಸಿದ ಪರಿಣಾಮ 08 ಮಂದಿ ಪ್ರಯಾಣಿಕರು ಸುಟ್ಟು ಹೋಗಿದ್ದು, ಹೊರ ಬರಲಾಗದೇ ಮೃತಪಟ್ಟಿದ್ದಾರೆ ಎಂದು ವಿವರಿಸಿದರು.

ಕಂಟೇನರ್ ಚಾಲಕ ಸೇರಿ 09 ಸಾವು ಬೆಂಕಿ ಕಾಣಿಸುತ್ತಿದ್ದಂತೆ ಬಸ್‌ನಲ್ಲಿದ್ದ ಕೆಲವರು ಪಾರಾಗಿದ್ದಾರೆ. ಎಂಟು ಜನ ಬಸ್ ಒಳಗೆ ಸಿಕ್ಕಿ ಹಾಕಿಕೊಂಡು ಮೃತಪಟ್ಟಿದ್ದಾರೆ. ತೀವ್ರ ಬೆಂಕಿ ಆವ-ರಿಸಿದ್ದರಿಂದ ಬಸ್‌ಗೆ ಗುದ್ದಿದ ಕಂಟೇನರ್ ಚಾಲಕ ಸಹ ಬೆಂಕಿಯಲ್ಲಿ ಬೆಂದು ಮೃತಪಟ್ಟಿದ್ದಾನೆ. ಒಬ್ಬ ಚಾಲಕ, ಎಂಟು ಮಂದಿ ಬಸ್ ಪ್ರಯಾಣಿಕರು ಸೇರಿ ಈವರೆಗೆ ಒಟ್ಟು ಒಂಬತ್ತು ಮಂದಿ ಮೃತಪಟ್ಟಿದ್ದಾಗಿ ಪ್ರಾಥಮಿಕ ವರದಿಯಿಂದ ತಿಳಿದು ಬಂದಿದೆ. ಉಳಿದಂತೆ ಗಾಯಾಳುಗಳ ಪೈಕಿ 12 ಹಿರಿಯೂ-ರಿಗೆ, ಒಂಬತ್ತು ಜನ ಶಿರಾ ಹಾಗೂ ಮೂರು ಜನ ಗಾಯಾಳುಗಳನ್ನು ತುಮಕೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಇದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಂಕಿ ತಗುಲಿದ ಮೂವರು ಗಾಯಾಳುಗಳನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ. ತೀವ್ರವಾಗಿ ಬೆಂಕಿ ತಗುಲಿ ಗಾಯಗೊಂಡವರನ್ನು ಹೊರತುಪಡಿಸಿದರೆ ಅದೃಷ್ಟವಶಾತ್ ಉಳಿದವರ ಜೀವಕ್ಕೆ ಅಪಾಯ ಇಲ್ಲ. ಒಟ್ಟು 32 ಜನ ಪ್ರಯಾಣಿಸುತ್ತಿದ್ದರು. ಅದರಲ್ಲಿ ಎಂಟು ಜನ ಮೃತಪಟ್ಟಿರುವ ಮಾಹಿತಿ ಸಿಕ್ಕಿದೆ. ಇನ್ನಷ್ಟು ಮಾಹಿತಿ ತಿಳಿಯಬೇಕಿದೆ ಎಂದರು.